# ಹೋರಾಟಗಾರರ ಮೇಲಿನ FIR ವಾಪಸ್ ಪಡೆಯಬೇಕು; ನಿಖಿಲ್ ಕುಮಾರಸ್ವಾಮಿ

• ಉದಯವಾಹಿನಿ, ಬೆಂಗಳೂರು

ಬಿಡದಿ ಟೌನ್‌ಶಿಪ್ ಹೋರಾಟಗಾರರ ಮೇಲೆ ಸರ್ಕಾರ ಹಾಕಿರೋ FIR ಕೂಡಲೇ ರದ್ದು ಮಾಡಬೇಕು ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಬಿಡದಿ ಟೌನ್‌ಶಿಪ್ ನೆಪದಲ್ಲಿ ಅಮಾಯಕ ರೈತರ ಮೇಲೆ ಎಫ್ ಐ ಆರ್ ದಾಖಲಿಸಿರುವ ಕಾಂಗ್ರೆಸ್ ಸರ್ಕಾರದ ದೌರ್ಜನ್ಯವನ್ನು ತೀವ್ರವಾಗಿ ಖಂಡಿಸುತ್ತೇನೆ. ಯಾವುದೇ ಮಾಹಿತಿ ಇಲ್ಲದೆ ರೈತರ ಭೂಮಿಗೆ ನುಗ್ಗಿ ಜಂಟಿ ಮಾಪನ ಮಾಡಲು ಮುಂದಾಗಿದ್ದರು. ಅದನ್ನು ಪ್ರಶ್ನಿಸಿದ ರೈತರ ಹೋರಾಟವನ್ನು ಹತ್ತಿಕ್ಕಲು ಈ ಜನವಿರೋಧಿ ಸರ್ಕಾರ ಈಋಖ ಅಸ್ತ್ರ ಬಳಸಿ ಬೆದರಿಸುತ್ತಿದೆ ಎಂದು ಕಿಡಿಕಾರಿದ್ದಾರೆ. ಕಾಂಗ್ರೆಸ್


ಉದಯವಾಹಿನಿ ಚಿತ್ರ

ಸರ್ಕಾರದ ಈ ದಬ್ಬಾಳಿಕೆಗೆ ನಮ್ಮ ರೈತ ಬಂಧುಗಳು ಹೆದರುವ ಅಗತ್ಯವಿಲ್ಲ. ನಿಮ್ಮ ನ್ಯಾಯಯುತ ಹೋರಾಟಕ್ಕೆ ಅಗತ್ಯವಿರುವ ಸಂಪೂರ್ಣ ಕಾನೂನು ನೆರವು ಹಾಗೂ ಬೆಂಬಲ ನೀಡಲು ನಾವೆಲ್ಲರೂ ನಿಮ್ಮೊಂದಿಗೆ ಸದಾ ಸಿದ್ಧರಿದ್ದೇವೆ. ಇನ್ನು 48 ಗಂಟೆಗಳ ಒಳಗೆ ರೈತರ ಮೇಲಿನ ಸುಳ್ಳು FIR ರದ್ದುಗೊಳಿಸಿ, ವಶಕ್ಕೆ ಪಡೆದಿರುವ ಅಮಾಯಕರನ್ನು ತಕ್ಷಣ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಈ ಜನವಿರೋಧಿ ಸರ್ಕಾರದ ವಿರುದ್ಧ ಹೋರಾಟ ಹಮ್ಮಿಕೊಳ್ಳುವುದು ನಿಶ್ಚಿತ ಎಂದು ಎಚ್ಚರಿಕೆ ನೀಡಿದ್ದಾರೆ. ಇನ್ನೂ ರಾಹುಲ್ ಗಾಂಧಿ ಅಂಡಮಾನ್- ನಿಕೋಬಾರ್‌ಗೆ ಭೇಟಿ ನೀಡುವ ಬದಲು ಬಿಡದಿಗೆ ಬರಲಿ, ನಮ್ಮ ರೈತರು ತೆಂಗು, ಭತ್ತ, ರೇಷ್ಮೆ ಬೆಳೆದು ಬದುಕು ಕಟ್ಟಿಕೊಂಡಿರುವುದನ್ನು ನೋಡಲಿ ಎಂದರು. 136 ಸೀಟು ಗೆಲ್ಲಿಸಿ ನಮ್ಮ ಜನರು ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ, ಒಂದು ವೇಳೆ ರಾಹುಲ್ ಗಾಂಧಿ ಬಿಡದಿಗೆ ಭೇಟಿ ನೀಡಿದರೆ ಮತ್ತಷ್ಟು ಸೀಟುಗಳನ್ನು ಗೆಲ್ಲಲು ಸಾಧ್ಯವಾಗಬಹುದು ಎಂದು ಲೇವಡಿ ಮಾಡಿದ್ದಾರೆ.

# ದಾಸರ ಪದಗಳ ಗಾಯನ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಜುಲೈ 16, ಗುರುವಾರ ಸಂಜೆ 5-15ಕ್ಕೆ ಶ್ರೀ ಮಾಧವ ಎಂ. ನಾಡಿಗೇರ್ ಇವರಿಂದ ದಾಸರ ಪದಗಳ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ವಾದ್ಯ ಸಹಕಾರ : ಶ್ರೀ ರಾಮು ಕೊಡೇಕಲ್ (ಹಾರ್ಮೋನಿಯಂ) ಮತ್ತು ಶ್ರೀ ಭೀಮಾಶಂಕರ ಹೇಮನೂರು (ತಬಲಾ).

ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ 45ನೇ ಅಡ್ಡರಸ್ತೆ, ಜಯನಗರ 5ನೇ ಬ್ಲಾಕ್, ಬೆಂಗಳೂರು-560041

# ಪೊರಕೆಯಿಂದ ಹಲ್ಲೆ-ಕಲ್ಲು ತೂರಾಟ ಒಪ್ಪಲ್ಲ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಶಾಂತಿಯುತ ಪ್ರತಿಭಟನೆ ನಡೆಸುವುದು ಪ್ರತಿಯೊಬ್ಬರ ಹಕ್ಕು ಮತ್ತು ಅದಕ್ಕೆ ಸರ್ಕಾರದ ವಿರೋಧವಿಲ್ಲ. ಆದರೆ ಪ್ರತಿಭಟನೆಯ ಹೆಸರಿನಲ್ಲಿ ಸರ್ಕಾರಿ ಅಧಿಕಾರಿಗಳ ಮೇಲೆ ಪೊರಕೆಯಿಂದ ಹಲ್ಲೆ ನಡೆಸುವುದು, ಕಲ್ಲು ತೂರಾಟ ನಡೆಸುವುದು ಹಾಗೂ ಕಾನೂನು ಕೈಗೆತ್ತಿಕೊಳ್ಳುವುದನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಮಂಗಳವಾರ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ನಡೆಯುತ್ತಿರುವ ರೈತರ ಪ್ರತಿಭಟನೆ ಕುರಿತು ಪ್ರತಿಕ್ರಿಯೆ ನೀಡಿದರು. ಶಾಂತಿಯುತ ಪ್ರತಿಭಟನೆ ನಡೆಸುವುದು ಪ್ರತಿಯೊಬ್ಬರ ಹಕ್ಕು ಮತ್ತು ಅದಕ್ಕೆ ಸರ್ಕಾರದ ವಿರೋಧವಿಲ್ಲ ಎಂದು ಹೇಳಿದ್ದಾರೆ. ಆದರೆ ಪ್ರತಿಭಟನೆಯ ಹೆಸರಿನಲ್ಲಿ ಸರ್ಕಾರಿ ಅಧಿಕಾರಿಗಳ ಮೇಲೆ ಪೊರಕೆಯಿಂದ ಹಲ್ಲೆ ನಡೆಸುವುದು, ಕಲ್ಲು ತೂರಾಟ ನಡೆಸುವುದು ಹಾಗೂ ಕಾನೂನು ಕೈಗೆತ್ತಿಕೊಳ್ಳುವುದನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ. ಇಂತಹ ಘಟನೆಗಳ ವಿರುದ್ಧ ಕಾನೂನು ಪ್ರಕಾರವೇ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸರ್ವೇ ಅಧಿಕಾರಿಯೊಬ್ಬರ ಮೇಲೆ ಪೊರಕೆಯಿಂದ ಹಲ್ಲೆ ನಡೆಸಲಾಗಿದೆ. ಕಲ್ಲು ತೂರಾಟವೂ ನಡೆದಿದೆ. ರೈತರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಬಿಡದಿಯಲ್ಲಿ ಟೌನ್‌ಶಿಪ್ ಯೋಜನೆಗೆ ವಿರೋಧ ವ್ಯಕ್ತವಾಗುತ್ತಿರುವುದು ನಮಗೂ ಗೊತ್ತಿದೆ. ಕಾನೂನುಬದ್ಧವಾಗಿ ಜನರು ಶಾಂತಿಯುತವಾಗಿ ಪ್ರತಿಭಟನೆ ನಡೆಸಿದರೆ ಯಾರೂ ಅದನ್ನು ವಿರೋಧಿಸುವುದಿಲ್ಲ. ಆದರೆ, ರಾಜಕೀಯ ಕಾರಣಗಳಿಂದ ಅಥವಾ ರಾಜಕೀಯ ಒತ್ತಡದ ಮೇರೆಗೆ ಪ್ರತಿಭಟನೆ ನಡೆಸಿ ಹಿಂಸಾಚಾರಕ್ಕೆ ಮುಂದಾದರೆ, ಸರ್ಕಾರ ಅಗತ್ಯವಿರುವ ಕಾನೂನು ಕ್ರಮವನ್ನು ಖಂಡಿತ ಕೈಗೊಳ್ಳುತ್ತದೆ ಎಂದು ಹೇಳಿದ್ದಾರೆ.

# ರೈತರ ಆಕ್ರೋಶ ಕಟ್ಟೆಯೊಡೆಯುವ ಮುನ್ನ ಕಾವೇರಿ ನೀರು ಬಿಡುಗಡೆ ಮಾಡಿ': ರಾಜ್ಯ ಸರ್ಕಾರಕ್ಕೆ HDK ಆಗ್ರಹ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಮಂಡ್ಯ ಜಿಲ್ಲೆಯ ರೈತರಿಗೆ ಕಳೆದ ಒಂದು ತಿಂಗಳಿನಿಂದಲೂ ಬೆಳೆಗಳಿಗೆ ನೀರು ಬಿಡುಗಡೆ ಮಾಡುವಂತೆ ಮನವಿ ಮಾಡುತ್ತಿದ್ದರೂ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕೇಂದ್ರ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಮಂಡ್ಯ ರೈತರ ಬೇಡಿಕೆಗೆ ತಮ್ಮ ಸಂಪೂರ್ಣ ಬೆಂಬಲವಿದೆ ಎಂದು ತಿಳಿಸಿದ್ದಾರೆ.

ಒಂದು ತಿಂಗಳಿನಿಂದ ಬೆಳೆಗಳಿಗೆ ನೀರು ಕೊಡಿ ಎಂದು ಮಂಡ್ಯ ರೈತರು ಅಂಗಲಾಚುತ್ತಿದ್ದರೂ ಈ ಸರ್ಕಾರದ ಕಿವಿಗೆ ಜಾಣಕಿವುಡು ಬಂದಿದೆ. ರೈತರ ಭೂಮಿ ಕಸಿಯುವುದರಲ್ಲಿ ರಣೋತ್ಸಾಹ ತೋರುವ ಸರ್ಕಾರಕ್ಕೆ ಅವರ ಬೆಳೆ ಉಳಿಸಲು ಏಕೆ ನಿರುತ್ಸಾಹವೋ ಅರ್ಥವಾಗುತ್ತಿಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ.

ಮಂಡ್ಯ ಜಿಲ್ಲೆಯ ರೈತರು ಬೆಳೆ ಉಳಿಸಿಕೊಳ್ಳಲು ಕಾವೇರಿ ನೀರಿನ ನಿರೀಕ್ಷೆಯಲ್ಲಿದ್ದು, ಕೂಡಲೇ ಕೆಆರ್‌ಎಸ್ ಜಲಾಶಯದಿಂದ ನಾಲೆಗಳಿಗೆ ನೀರು ಹರಿಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಮಂಡ್ಯ ರೈತರ ಬೇಡಿಕೆಗೆ ನನ್ನ ಸಂಪೂರ್ಣ ಬೆಂಬಲವಿದೆ. ತಕ್ಷಣವೇ ಕೆಆರ್‌ಎಸ್ ಜಲಾಶಯದಿಂದ ನಾಲೆಗಳಿಗೆ ನೀರು ಹರಿಸಬೇಕು. ರೈತರ ಆಕ್ರೋಶ ಕಟ್ಟೆಯೊಡೆಯುವ ಮೊದಲು ಸರ್ಕಾರ ಎಚ್ಚೆತ್ತುಕೊಂಡು ನೀರು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

# ನೀರಾವರಿ ಮುಖ್ಯವೋ, ಕುಡಿಯುವ ನೀರು ಮುಖ್ಯವೋ? ಪರಿಶೀಲನೆಗೆ ಮುಂದಾದ ರಾಜ್ಯ ಸರ್ಕಾರ

• ಉದಯವಾಹಿನಿ, ಬೆಂಗಳೂರು

ಕಾವೇರಿ ನೀರನ್ನು ನೀರಾವರಿಗೆ ಬಿಡುಗಡೆ ಮಾಡುವಂತೆ ಮಂಡ್ಯ, ಕೆಆರ್ ಎಸ್ ಭಾಗದ ರೈತರಿಂದ ಒತ್ತಡ ಹೆಚ್ಚುತ್ತಿರುವ ನಡುವೆಯೇ, ಈ ಕುರಿತು ಮಂಡ್ಯ ಮತ್ತು ಶ್ರೀರಂಗಪಟ್ಟಣದ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ತಮ್ಮನ್ನು ಭೇಟಿ ಮಾಡಿರುವುದಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೃಢಪಡಿಸಿದ್ದಾರೆ. ಸರ್ಕಾರ ಸಭೆ ನಡೆಸಿದ ಬಳಿಕವೇ ಅಂತಿಮ ತೀರ್ಮಾನ ಪ್ರಕಟಿಸಲಾಗುವುದು ಎಂದು ಹೇಳುವ ಮೂಲಕ ಯಾವುದೇ ಭರವಸೆ ಅವರಿಂದ ಸಿಕ್ಕಿಲ್ಲ. ಅನಿಶ್ಚಿತ ಮುಂಗಾರು ಪರಿಸ್ಥಿತಿಯಲ್ಲಿ ನೀರಾವರಿ ಬೇಡಿಕೆ ಮತ್ತು ಕುಡಿಯುವ ನೀರಿನ ಸಂಗ್ರಹದ ನಡುವೆ ಸಮತೋಲನ ಸಾಧಿಸುವ ಸವಾಲು ರಾಜ್ಯ ಸರ್ಕಾರದ ಮುಂದಿದೆ. ಜಲಸಂಪನ್ಮೂಲ ತಜ್ಞರ ಪ್ರಕಾರ, ಕರ್ನಾಟಕವು ಇತ್ತೀಚಿನ ವರ್ಷಗಳಲ್ಲೇ ಅತ್ಯಂತ ಸವಾಲಿನ ಮುಂಗಾರು ಪರಿಸ್ಥಿತಿಯನ್ನು ಎದುರಿಸುತ್ತಿದ್ದು, ಪ್ರಸ್ತುತ ಕೆಆರ್‌ಎಸ್ ಜಲಾಶಯದಲ್ಲಿ ಸುಮಾರು 40 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ.

ಬೆಂಗಳೂರು, ಮೈಸೂರು, ಮಂಡ್ಯ, ಮದ್ದೂರು, ಚನ್ನಪಟ್ಟಣ ಸೇರಿದಂತೆ ಕಾವೇರಿ ನೀರನ್ನು ಅವಲಂಬಿಸಿರುವ ನಗರಗಳು ಮತ್ತು ಪಟ್ಟಣಗಳು ತಿಂಗಳಿಗೆ ಒಟ್ಟಾರೆ 5ರಿಂದ 6 ಟಿಎಂಸಿ ಅಡಿ ನೀರನ್ನು ಬಳಸುತ್ತವೆ.

# 50 ಲಕ್ಷ ರೂಪಾಯಿ ವರದಕ್ಷಿಣೆ ತರುವಂತೆ ಪತ್ನಿಗೆ ಕಿರುಕುಳ ಆರೋಪ: ಪಿಎಸ್‌ಐ ಅರೆಸ್ಟ್

• ಉದಯವಾಹಿನಿ, ಬೆಂಗಳೂರು

ವರದಕ್ಷಿಣೆ ತರುವಂತೆ ಪತ್ನಿಗೆ ಕಿರುಕುಳ ನೀಡಿದ್ದಲ್ಲದೇ, ಮಚ್ಚಿನಿಂದ ಹಲ್ಲೆಗೆ ಯತ್ನಿಸಿದ್ದ ಆರೋಪದಡಿ ಓರ್ವ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ನನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಹಲ್ಲೆಗೊಳಗಾದ ಪತ್ನಿ ರೇವತಿ ಎಂಬವರು ನೀಡಿದ ದೂರು ಆಧರಿಸಿ ಪತಿ ಪಿಎಸ್‌ಐ ಕೆ.ಎಸ್.ಬೈರಪ್ಪ ಅವರನ್ನು ಬಂಧಿಸಲಾಗಿದೆ. ಕೃತ್ಯ ನಡೆದ ಸ್ಥಳ ಆಧರಿಸಿ ತಾವರೆಕೆರೆ ಪೊಲೀಸರಿಗೆ ಪ್ರಕರಣ ಹಸ್ತಾಂತರಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿ ಬೈರಪ್ಪ ಸದ್ಯ ನಗರ ಪೊಲೀಸ್ ಆಯುಕ್ತರ ಕಚೇರಿಯ ಕಂಟ್ರೋಲ್ ರೂಮ್ ವಿಭಾಗದಲ್ಲಿ ಪಿಎಸ್‌ಐ ಆಗಿ ಕೆಲಸ ಮಾಡುತ್ತಿದ್ದಾರೆ. ಈ ಹಿಂದೆ ಲಂಚ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರ ಕಾರ್ಯಾಚರಣೆಯಲ್ಲಿ ಟ್ರ್ಯಾಪ್ ಆದ ಹಿನ್ನೆಲೆಯಲ್ಲಿ ಅಮಾನತುಗೊಂಡಿದ್ದರು.

# ಬಿಡದಿ ಟೌನ್‌ಶಿಪ್ ಯೋಜನೆ ಕೈಬಿಡದಿದ್ದರೆ ವಿಧಾನಸೌಧ ಮುಂದೆ ಧರಣಿ

## ಇದೀಗ 93 ವರ್ಷದ ದೇವೇಗೌಡರೇ ಎಂಟ್ರಿಯಾಗುತ್ತಿರುವುದು ಪ್ರತಿಭಟನೆಗೆ ಮತ್ತಷ್ಟು ಬಲ ಬಂದಿದೆ

• ಉದಯವಾಹಿನಿ, ಬೆಂಗಳೂರು

ಬಿಡದಿ ಟೌನ್‌ಶಿಪ್ ಯೋಜನೆ ಕೈಬಿಡದಿದ್ದರೆ ವಿಧಾನಸೌಧ ಮುಂದೆ ಧರಣಿ ಕೂರುವುದಾಗಿ ಮಾಜಿ ಪ್ರಧಾನಿ ಜೆಡಿಎಸ್ ವರಿಷ್ಠ ಹೆಚ್ ಡಿ ದೇವೇಗೌಡ ಎಚ್ಚರಿಕೆ ನೀಡಿದ್ದಾರೆ.

ಈ ಸಂಬಂಧ ಇಂದು ಸಿಎಂ ಡಿ ಕೆ ಶಿವಕುಮಾರ್ ಅವರಿಗೆ ಪತ್ರ ಬರೆದು ಯೋಜನೆಯಿಂದ ಬಿಡದಿ ಸುತ್ತಮುತ್ತ ರೈತರಿಗೆ ಆಗುವ ತೊಂದರೆಗಳೇನು ಎಂಬುದನ್ನು ವಿವರಿಸಿ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯಬೇಕೆಂದು ಎಚ್ಚರಿಕೆ ನೀಡಿದ್ದಾರೆ.

ಬಿಡದಿ ಟೌನ್ ಶಿಪ್ ಯೋಜನೆ ಬಗ್ಗೆ ಇದುವರೆಗೆ ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ಹಾಗೂ ಇತರ ಜೆಡಿಎಸ್ ಮತ್ತು ಬಿಜೆಪಿ ನಾಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿ ಹೇಳಿಕೆ ನೀಡುತ್ತಿದ್ದರು. ಇದೀಗ 93 ವರ್ಷದ ದೇವೇಗೌಡರೇ ಎಂಟ್ರಿಯಾಗುತ್ತಿರುವುದು ಪ್ರತಿಭಟನೆಗೆ ಮತ್ತಷ್ಟು ಬಲ ಬಂದಿದೆ.

ಬಿಡದಿ ಟೌನ್‌ಶಿಪ್ ಯೋಜನೆ ಕುರಿತಾಗಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಮತ್ತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವಿನ ರಾಜಕೀಯ ಸಂಘರ್ಷವು ಬೆಂಗಳೂರು ರಾಮನಗರ ಮಾರ್ಗದಲ್ಲಿನ ಭೂಮಿ, ಮೂಲಸೌಕರ್ಯ ಹಾಗೂ ರಿಯಲ್ ಎಸ್ಟೇಟ್ ರಾಜಕೀಯದ ಹಳೆಯ ಬಿರುಕುಗಳನ್ನು ಮತ್ತೆ ಬಯಲಿಗೆಳೆದಿದೆ.

ಸುಮಾರು 7,500 ಎಕರೆ ವ್ಯಾಪ್ತಿಯಲ್ಲಿ 18,000 ಕೋಟಿ ರೂಪಾಯಿ ವೆಚ್ಚದಲ್ಲಿ ಪ್ರಸ್ತಾವಿಸಲಾದ ಈ ಯೋಜನೆಯು ಈಗ ಹೊಸ ರಾಜಕೀಯ ಸಂಘರ್ಷದ ಕೇಂದ್ರಬಿಂದುವಾಗಿದೆ. ದೇವೇಗೌಡ ಹಾಗೂ ಅವರ ಪುತ್ರ, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಈ ಯೋಜನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಸಚಿವ ಸಂಪುಟ ಯೋಜನೆಗೆ ಅನುಮೋದನೆ ನೀಡಿದ ಬಳಿಕ ದೇವೇಗೌಡರು, ರೈತರ ಭೂಮಿಯನ್ನು ಲಾಭದ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿ, ಈ ಯೋಜನೆಯ ಹಿಂದೆ ಭೂ ಮಾಫಿಯಾ ಇದೆ ಎಂದು ದೂರಿದ್ದರು. ಅಲ್ಲದೆ, ಮಧ್ಯಪ್ರವೇಶಿಸುವಂತೆ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿದ್ದರು.

ಕುಮಾರಸ್ವಾಮಿ ಅವರು, ಡಿ.ಕೆ. ಶಿವಕುಮಾರ್ ಈ ಯೋಜನೆಯನ್ನು ರಿಯಲ್ ಎಸ್ಟೇಟ್ ವ್ಯವಹಾರವನ್ನಾಗಿ ಪರಿವರ್ತಿಸಿದ್ದಾರೆ ಎಂದು ಆರೋಪಿಸಿ, ಪ್ರತಿಭಟಿಸುತ್ತಿರುವ ರೈತರಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಘೋಷಿಸಿದ್ದಾರೆ.


ಉದಯವಾಹಿನಿ ಚಿತ್ರ

ಕುಮಾರಸ್ವಾಮಿ ಹಾಗೂ ದೇವೇಗೌಡರ ಕುಟುಂಬವು ಐತಿಹಾಸಿಕವಾಗಿ ರಾಮನಗರ ಮತ್ತು ಚನ್ನಪಟ್ಟಣ ಕ್ಷೇತ್ರಗಳನ್ನು ಪ್ರತಿನಿಧಿಸುತ್ತ ಬಂದಿದ್ದರೆ, ಕನಕಪುರ ಕ್ಷೇತ್ರದಲ್ಲಿ ಡಿ.ಕೆ. ಶಿವಕುಮಾರ್ ಈ ಭಾಗದಲ್ಲಿ ಕಾಂಗ್ರೆಸ್ ಪ್ರಭಾವವನ್ನು ವಿಸ್ತರಿಸಿದ್ದು, ಈಗ ಈ ಪ್ರದೇಶ ಎರಡೂ ರಾಜಕೀಯ ಪಕ್ಷಗಳ ನೇರ ಹಣಾಹಣಿಯ ಅಖಾಡವಾಗಿದೆ.

1 ತೀವ್ರ ಆಕ್ಷೇಪ ವ್ಯಕ್ತಪಡಿಸಿ ಹೇಳಿಕೆ
2 ಹಿಂದೆ ಭೂ ಮಾಫಿಯಾ ಇದೆ
3 ರೈತರಿಗೆ ಸಂಪೂರ್ಣ ಬೆಂಬಲ



> ಈ ಆರೋಪಗಳನ್ನು ತಳ್ಳಿಹಾಕಿರುವ ಡಿ ಕೆ ಶಿವಕುಮಾರ್, ಸುಮಾರು 80 ಶೇಕಡಾ ರೈತರು ಯೋಜನೆಗೆ ಒಪ್ಪಿಗೆ ನೀಡಿದ್ದಾರೆ ಎಂದು ಹೇಳಿದ್ದಾರೆ. ಸರ್ಕಾರ ಜೂನ್‌ನಲ್ಲೇ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಿದೆ.
> -ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ

**ಹಳೆಯ ಸಂಘರ್ಷವನ್ನು ಮತ್ತೆ ನೆನಪಿಸಿದೆ.**
ಈ ವಿವಾದವು ಉದ್ಯಮಿ ಅಶೋಕ್ ಖೇಣಿ ಹಾಗೂ ದೇವೇಗೌಡರ ನಡುವಿನ ಬೆಂಗಳೂರುಮೈಸೂರು ಮೂಲಸೌಕರ್ಯ ಕಾರಿಡಾರ್ ಯೋಜನೆಗೆ ಸಂಬಂಧಿಸಿದ ಹಲವು ದಶಕಗಳ ಹಳೆಯ ಸಂಘರ್ಷವನ್ನು ಮತ್ತೆ ನೆನಪಿಸಿದೆ.

> ಬೆಂಗಳೂರು ನಗರ ಹೊರವಲಯ ವೇಗವಾಗಿ ವಿಸ್ತರಿಸುತ್ತಿರುವ ಹಿನ್ನೆಲೆಯಲ್ಲಿ ಈ ಭಾಗಗಳ ಭೂಮಿಯ ವಾಣಿಜ್ಯ ಮತ್ತು ರಾಜಕೀಯ ಮಹತ್ವ ಹೆಚ್ಚುತ್ತಿರುವುದರಿಂದ ಇಂತಹ ಭೂ ವಿವಾದಗಳು ಪದೇ ಪದೇ ಮರುಕಳಿಸುತ್ತಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ. -ರಾಜಕೀಯ ವಿಶ್ಲೇಷಕರು

**ಬಿಡದಿ ಟೌನ್ ಶಿಪ್ ಜಟಾಪಟಿ: ಡಿಕೆ ಶಿವಕುಮಾರ್‌ಗೆ 6 ಬೇಡಿಕೆಗಳನ್ನು ಇಟ್ಟ ಎಚ್‌ಡಿ ದೇವೇಗೌಡ, ಸ್ಪಂದಿಸದಿದ್ದರೆ ಸತ್ಯಾಗ್ರಹ ಎಚ್ಚರಿಕೆ**

## ಬಿಡದಿ ಹೋರಾಟ ತಾರಕಕ್ಕೆ

ಹೋಬಳಿಯಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ (ಜಿಬಿಐಟಿ) ಸಂಬಂಧಿಸಿದಂತೆ, ಬೈರಮಂಗಲದಲ್ಲಿ ಪರ ಮತ್ತು ವಿರುದ್ಧವಾಗಿ ನಡೆಯುತ್ತಿರುವ ಹೋರಾಟ ದಿನದಿಂದ ದಿನಕ್ಕೆ ತಾರಕಕ್ಕೇರುತ್ತಿದೆ. ಯೋಜನೆ ವಿರುದ್ಧ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿರುವ ರೈತರು ಜಂಟಿ ಅಳತೆ ಪ್ರಮಾಣೀಕರಣ (ಜೆಎಂಸಿ) ವಿರೋಧಿಸಿ ಮಂಗಳವಾರ ವಿಷದ ಬಾಟಲಿ ಪ್ರದರ್ಶಿಸಿದರು. ಕೂಗಳತೆ ದೂರದಲ್ಲಿ ಯೋಜನೆ ಪರವಾಗಿ ಧರಣಿ ನಡೆಸುತ್ತಿರುವ ರೈತರು ಜೆಎಂಸಿ ಮಾಡುವಂತೆ ಆಗ್ರಹಿಸಿ ರಸ್ತೆ ತಡೆ ಮಾಡಿದರು.

ಒಂದು ಕಡೆ ಟೌನ್ ಶಿಪ್ ವಿರುದ್ಧದ ಘೋಷಣೆಗಳು ಮೊಳಗುತ್ತಿದ್ದರೆ, ಮತ್ತೊಂದೆಡೆ ಪರವಾದ ಘೋಷಣೆಗಳು ಕೇಳಿಬಂದವು. ವಿಷಯ ತಿಳಿದು ಸ್ಥಳಕ್ಕೆ ಬಂದ ಬಿಡದಿ ಠಾಣೆ ಇನ್‌ಸ್ಪೆಕ್ಟರ್ ವಿಜಯಕುಮಾರ್ ಬಂದರು. ರಸ್ತೆ ತಡೆ ನಡೆಸದಂತೆ ರೈತರ ಮನವೊಲಿಸಲು ಮುಂದಾದರು. ಅದಕ್ಕೆ ಬಗ್ಗದ ರೈತರು ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬರಬೇಕು. ಕೂಡಲೇ ನಮ್ಮ ಜಮೀನುಗಳಲ್ಲಿ ಜೆಎಂಸಿ ಆರಂಭಿಸಬೇಕು ಎಂದು ಆಗ್ರಹಿಸಿದರು.

# ಮುಖ್ಯಮಂತ್ರಿಗಳ ಪ್ರಧಾನ ಸಲಹೆಗಾರರಾಗಿ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ ಚಂದ್ರಶೇಖರ್ ನೇಮಕ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪ್ರಧಾನ ಸಲಹೆಗಾರರಾಗಿ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ಅವರನ್ನು ನೇಮಕ ಮಾಡಲಾಗಿದೆ.

ಯಾವುದೇ ರೀತಿಯ ಸಂಭಾವನೆ, ಭತ್ಯೆ, ಗೌರವಧನ ಅಥವಾ ಇತರೆ ಯಾವುದೇ ಸೌಲಭ್ಯಗಳಿಗೆ ಅರ್ಹತೆ ಇಲ್ಲದ ಗೌರವಾಧಾರಿತ ಆಧಾರದ ಮೇಲೆ ಚಂದ್ರಶೇಖರ್ ಅವರನ್ನು ನೇಮಕ ಮಾಡಲಾಗಿದೆ ಎಂದು ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ.

ಮುಖ್ಯಮಂತ್ರಿಯವರಿಗೆ ರಾಜಕೀಯ ವ್ಯವಹಾರಗಳು ಹಾಗೂ ಸಾರ್ವಜನಿಕ ಕುಂದುಕೊರತೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಹಾಯ ಮಾಡಲು ತಕ್ಷಣದಿಂದ ಜಾರಿಗೆ ಬರುವಂತೆ ಚಂದ್ರಶೇಖರ್ ಅವರನ್ನು ನೇಮಿಸಲಾಗಿದೆ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.


ಉದಯವಾಹಿನಿ ಚಿತ್ರ

ಜಿ.ಸಿ. ಚಂದ್ರಶೇಖರ್ ಅವರು ಪ್ರಸ್ತುತ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಕಾರ್ಯಾಧ್ಯಕ್ಷರಾಗಿದ್ದಾರೆ. ಅವರು ಮೂಲತಃ ಹಾಸನದವರು. ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಅವರು ಪಕ್ಷದ ವ್ಯಕ್ತಿಯೆಂದೇ ಗುರುತಿಸಿಕೊಂಡಿದ್ದಾರೆ. ಬೇರೆ ಅಧಿಕಾರದ ಹುದ್ದೆಗಳಿಗಿಂತ, ಪಕ್ಷದ ಕೆಲಸಗಳಿಗಾಗಿ ಹೆಚ್ಚು ದುಡಿದವರು. ಜಿ ಪರಮೇಶ್ವರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿದ್ದಾಗ, ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಅವರ ಪಕ್ಷ ನಿಷ್ಠೆಯ ಕಾರಣಕ್ಕಾಗಿ ಅವರನ್ನು ರಾಜ್ಯಸಭೆ ಸದಸ್ಯರನ್ನಾಗಿಯೂ ನೇಮಿಸಲಾಗಿತ್ತು.


# ಬಡಾಶ್ರಮಗಳ ಮಕ್ಕಳಿಗೆ ಕೈಲಾದ ಸಹಕಾರವನ್ನು ಸದಾ ನೀಡಬೇಕು

• ಉದಯವಾಹಿನಿ, ಕೆ.ಆರ್.ಪುರಂ

ಜನ್ಮದಿನವನ್ನು ಸೇವಾದಿನವಾಗಿಸಿಕೊಂಡು ಸೇವಾ ಕಾರ್ಯಗಳನ್ನು ಮಾಡುವಂತೆ ಆದಿ ಜಾಂಭವ ಸಂಘದ ಬೆಂ. ಪೂರ್ವ ತಾಲ್ಲೂಕು ,ಪ್ರಧಾನ ಕಾರ್ಯದರ್ಶಿ ಬಿ ಆರ್ ಮಾದೇಶ್ ತಿಳಿಸಿದರು.

ಮಹದೇವಪುರ ಕ್ಷೇತ್ರದ ಮಂಡೂರು ಗ್ರಾಮ ಪಂಚಾಯತಿಯಲ್ಲಿನ ಹೊಸ ಬೆಳಕು ವೃದ್ಧಾಶ್ರಮದಲ್ಲಿ ಅವರ ಸೇವಾದಿನವನ್ನು ಆಚರಿಸಿಕೊಂಡು ಮತನಾಡಿದ ಅವರು.

ಸೇವೆಯಿಂದ ಭಗವಂತನನ್ನು ಕಾಣಬಹುದು, ಬಡಾಶ್ರಮಗಳ ಮಕ್ಕಳಿಗೆ ಕೈಲಾದ ಸಹಕಾರವನ್ನು ಸದಾ ನೀಡಬೇಕು, ಮಕ್ಕಳಲ್ಲಿ ದೇವರನ್ನು ಕಾಣಬಹುದು ಎಂದು ನುಡಿದರು. ಇದೇವೇಳೆ ಸುಮಾರು 150 ಮಕ್ಕಳಿಗೆ


ಉದಯವಾಹಿನಿ ಚಿತ್ರ

ಊಟದ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಮುಖಂಡರಾದ ಎ. ಮುನಿಯಪ್ಪ, ಚಿಕ್ಕಮುನಿಯಪ್ಪ, ಬಿಎಂ ಆರ್ ಡಿ ಎ ಸದಸ್ಯರಾದ ಹೊಸಕೋಟೆ ಎಚ್ ಎಂ ಸುಬ್ಬರಾಜು, ಎಂ ಸಿ ಕೃಷ್ಣಪ್ಪ, ಶಂಬು, ಜಿ ರಮೇಶ್ ಚಂದನ್, ಅಶೋಕ್, ನಾರಾಯಣಮ್ಮ, ಮಾದೇಶ್, ಡಾ. ವಿ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

# ಗ್ರೇಟರ್ ಬೆಂಗಳೂರು ಪ್ರಾಧಿಕಾರ ತೆಕ್ಕೆಗೆ ಎಲೆ ಮಲ್ಲಪ್ಪ ಶೆಟ್ಟಿ ಕೆರೆ

• ಉದಯವಾಹಿನಿ, ಬೆಂಗಳೂರು

ಪೂರ್ವ ಬೆಂಗಳೂರಿನ 500 ಎಕರೆ ವ್ಯಾಪ್ತಿಯ ಎಲೆ ಮಲ್ಲಪ್ಪ ಶೆಟ್ಟಿ ಕೆರೆ, ಇದುವರೆಗೆ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿದ್ದು, ಶೀಘ್ರದಲ್ಲೇ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ವರ್ಗಾವಣೆಯಾಗಲಿದೆ. ಇಲಾಖೆಯ ಇಂಜಿನಿಯರ್‌ಗಳ ಪ್ರಕಾರ, ಹಣದ ಕೊರತೆಯೇ ಈ ವರ್ಗಾವಣೆಗೆ ಪ್ರಮುಖ ಕಾರಣವಾಗಿದೆ. ಕೆರೆಯ ಪುನಶ್ಚೇತನ, ಭದ್ರತೆ, ಬೇಲಿ ನಿರ್ಮಾಣ ಹಾಗೂ ವಾರ್ಷಿಕ ನಿರ್ವಹಣೆಗೆ ಕನಿಷ್ಠ 20 ಕೋಟಿ ರೂಪಾಯಿ ಅಗತ್ಯವಿದೆ.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ನಿರ್ದೇಶನದಂತೆ ಕೆರೆಯ ಸುತ್ತ 9 ಕಿ.ಮೀ. ಚೈನ್-ಲಿಂಕ್ ಬೇಲಿ ನಿರ್ಮಾಣ ಕಾರ್ಯ ಆರಂಭಿಸಿದ್ದೇವೆ. ಇದುವರೆಗೆ 7 ಕಿ.ಮೀ. ಪ್ರದೇಶದಲ್ಲಿ ಬೇಲಿ ಅಳವಡಿಸಲಾಗಿದೆ.

ಅಪಾರ್ಟ್‌ಮೆಂಟ್ ಸಂಕೀರ್ಣಕ್ಕೆ ಹೋಗುವ ಪ್ರವೇಶ ರಸ್ತೆ ಕೆರೆಯ ಮೂಲಕ ಹಾದುಹೋಗಿದ್ದು, ಈ ಸಂಬಂಧ ಬಿಲ್ಡರ್ ಒಬ್ಬರು ಅಧಿಕಾರಿಗಳ ಮೇಲೆ ಒತ್ತಡ ಹೇರುತ್ತಿದ್ದಾರೆ.

ಜಲಮೂಲದ ನಿರ್ವಹಣೆಗೆ ಅಗತ್ಯವಾದ ಸಿಬ್ಬಂದಿ ಮತ್ತು ಯಂತ್ರೋಪಕರಣಗಳು ಜಿಬಿಎ ಬಳಿ ಇರುವುದರಿಂದ ಕೆರೆಯನ್ನು ಅದಕ್ಕೆ ವರ್ಗಾಯಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಈ ಕುರಿತು ಪತ್ರವ್ಯವಹಾರ ಆರಂಭವಾಗಿದೆ ಎಂದು ಇಲಾಖೆಯ ಇಂಜಿನಿಯರ್ ತಿಳಿಸಿದರು. ಜೂನ್‌ನಲ್ಲೇ ಈ ಪ್ರಕ್ರಿಯೆ ಆರಂಭವಾಗಿದ್ದು, ಆಗಸ್ಟ್ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ಅವರು ಹೇಳಿದರು.

ಆದರೆ, ಬಿಬಿಎಂಪಿಯ ಹಿರಿಯ ಕೆರೆ ಇಂಜಿನಿಯರ್ , ಈಗಾಗಲೇ ಬಜೆಟ್ ಅಂತಿಮಗೊಂಡಿರುವುದರಿಂದ, ಕೆರೆಯ ಅಭಿವೃದ್ಧಿಗೆ ಅಗತ್ಯವಿರುವ ವೆಚ್ಚವನ್ನು ಸಣ್ಣ ನೀರಾವರಿ ಇಲಾಖೆಯೂ ಹಂಚಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು. ಸಾಮಾಜಿಕ ಹೋರಾಟಗಾರ ಜಗನ್ ಕುಮಾರ್, ಕೆರೆ ಮತ್ತು ಅದರ ಪರಿಸರದ ಸಮಸ್ಯೆಗಳನ್ನು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಗಮನಕ್ಕೆ ತಂದ ಬಳಿಕ ಎನ್‌ಜಿಟಿ ಇಲಾಖೆಯನ್ನು ತರಾಟೆಗೆ ತೆಗೆದುಕೊಂಡಿತ್ತು.


ಉದಯವಾಹಿನಿ ಚಿತ್ರ

> ಕೆರೆಯ ಸಮೀಪ ತ್ಯಾಜ್ಯ ಮತ್ತು ಕಸವನ್ನು ಸುರಿಯುವುದರಿಂದ ಹೂಳು ನಿರ್ಮಾಣವಾಗಿ ಅದು ಕೆರೆಗೆ ಸೇರುತ್ತಿದೆ. ಜೊತೆಗೆ, ಒಳಚರಂಡಿ ಶುದ್ಧೀಕರಣ ಘಟಕದಿಂದ (ಎಸ್‌ಟಿಪಿ) ಹೊರಬರುವ ನೀರೂ ಕೆರೆಗೆ ಹರಿಯುತ್ತಿದೆ ಎಂದು ಜಗನ್ ಕುಮಾರ್ ಹೇಳಿದರು.

# ಸುರಂಗ ಮಾರ್ಗ ನಿರ್ಮಾಣ: ಪ್ರತಿ ಕಿ.ಮೀ.ಗೆ ಮೆಟ್ರೋಗಿಂತ 1.5 ಪಟ್ಟು ದುಬಾರಿ !

## ಯೋಜನೆಗಳ ಡಿಪಿಆರ್‌ಗಳ ಹೋಲಿಕೆ ಎರಡರ ನಿರ್ಮಾಣ ವೆಚ್ಚದಲ್ಲಿನ ದೊಡ್ಡ ವ್ಯತ್ಯಾಸವನ್ನು ತೋರಿಸುತ್ತದೆ.

• ಉದಯವಾಹಿನಿ, ಬೆಂಗಳೂರು

ಕೆ.ಆರ್.ಪುರಂನಿಂದ ಹೆಬ್ಬಾಳವರೆಗೆ ಪ್ರಸ್ತಾವಿತ 16.75 ಕಿ.ಮೀ. ಸುರಂಗ ರಸ್ತೆ ಯೋಜನೆಯ ಪ್ರತಿ ಕಿಲೋಮೀಟರ್ ನಿರ್ಮಾಣ ವೆಚ್ಚವು ಇದೇ ಮಾರ್ಗದ ಸಮೀಪ ಸಾಗಲಿರುವ ನಮ್ಮ ಮೆಟ್ರೋ ರೆಡ್ ಲೈನ್ ಯೋಜನೆಗಿಂತ ಸುಮಾರು ಒಂದೂವರೆ ಪಟ್ಟು ಹೆಚ್ಚಾಗಿದೆ. ಎರಡೂ ಯೋಜನೆಗಳ ವಿವರವಾದ ಯೋಜನಾ ವರದಿ ಪ್ರಕಾರ, ಟನಲ್ ರಸ್ತೆಯ ಪ್ರತಿ ಕಿ.ಮೀ. ವೆಚ್ಚ 1,061 ಕೋಟಿ ರೂ ಆಗಿದ್ದರೆ, ಮೆಟ್ರೋ ರೆಡ್ ಲೈನ್‌ನ ವೆಚ್ಚ 687 ಕೋಟಿ ರೂ ಆಗಿದೆ.

ನಮ್ಮ ಮೆಟ್ರೋ 3ಎ ಹಂತ ಯೋಜನೆಯ ಡಿಪಿಆರ್ ಸೋಮವಾರ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಾಗಿದ್ದು, ರೆಡ್ ಲೈನ್ ಹಾಗೂ ಪ್ರಸ್ತಾವಿತ ಟನಲ್ ರಸ್ತೆ ಯೋಜನೆಗಳ ಡಿಪಿಆರ್‌ಗಳ ಹೋಲಿಕೆ ಎರಡರ ನಿರ್ಮಾಣ ವೆಚ್ಚದಲ್ಲಿನ ದೊಡ್ಡ ವ್ಯತ್ಯಾಸವನ್ನು ಬಯಲಿಗೆಳೆದಿದೆ. ನಗರದ ಒಂದೇ ರೀತಿಯ ಹಾಗೂ ಇನ್ನಷ್ಟು ಉದ್ದದ ಮಾರ್ಗವನ್ನು ಸಂಪರ್ಕಿಸುವ ಮೆಟ್ರೋ ಯೋಜನೆ, ಪ್ರತಿ ಕಿಲೋಮೀಟರ್‌ಗೆ ಟನಲ್ ರಸ್ತೆಯಿಗಿಂತ ಕಡಿಮೆ ವೆಚ್ಚದಲ್ಲಿ ನಿರ್ಮಾಣವಾಗಲಿದೆ.

ಡಿಪಿಆರ್ ಪ್ರಕಾರ, ಸರ್ಜಾಪುರದಿಂದ ಹೆಬ್ಬಾಳದವರೆಗೆ 37.80 ಕಿ.ಮೀ. ಉದ್ದದ ಮೆಟ್ರೋ 3ಎ ಹಂತದ ಯೋಜನೆಗೆ 25,999 ಕೋಟಿ ರೂ. ವೆಚ್ಚ ಅಂದಾಜಿಸಲಾಗಿದೆ. ಅಂದರೆ ಪ್ರತಿ ಕಿಲೋಮೀಟರ್‌ಗೆ ಸುಮಾರು 687 ಕೋಟಿ ರೂ ವೆಚ್ಚವಾಗಲಿದೆ.

ಈ ಮಾರ್ಗದಲ್ಲಿ 23.524 ಕಿ.ಮೀ. ಎತ್ತರದ ಮಾರ್ಗ (ಎಲಿವೇಟೆಡ್ ವಯಾಡಕ್ಟ್)


ಉದಯವಾಹಿನಿ ಚಿತ್ರ

1 6.75 ಕಿ.ಮೀ. ಸುರಂಗ ರಸ್ತೆ
2 ರೆಡ್ ಲೈನ್‌ನ ವೆಚ್ಚ 687 ಕೋಟಿ
3 3ಎ ಹಂತದ ಯೋಜನೆಗೆ 25,999 ಕೋಟಿ

ನಿರ್ಮಾಣವಾಗಲಿದ್ದು, ಅದರಲ್ಲಿ 17 ನಿಲ್ದಾಣಗಳು ಇರಲಿವೆ. ಉಳಿದ 14.28 ಕಿ.ಮೀ. ಭೂಗತ ಮಾರ್ಗದಲ್ಲಿ 10 ನಿಲ್ದಾಣಗಳು ನಿರ್ಮಾಣವಾಗಲಿದ್ದು, ಒಟ್ಟು 27 ನಿಲ್ದಾಣಗಳು ಇರಲಿವೆ.

ಇದಕ್ಕೆ ಹೋಲಿಸಿದರೆ, 16.75 ಕಿ.ಮೀ. ಉದ್ದದ ಟನಲ್ ರಸ್ತೆ ಯೋಜನೆಯ ಪ್ರಸ್ತುತ ಅಂದಾಜು ವೆಚ್ಚ 17,780 ಕೋಟಿ ರೂ, ಅಂದರೆ ಪ್ರತಿ ಕಿಲೋಮೀಟರ್‌ಗೆ 1,061 ಕೋಟಿ ರೂ ಆಗಿದೆ.

ನಿರ್ಮಾಣ ವೆಚ್ಚ ಮಾತ್ರವಲ್ಲದೆ, ಪ್ರಯಾಣ ವೆಚ್ಚದಲ್ಲಿಯೂ ಎರಡೂ ಯೋಜನೆಗಳ ನಡುವೆ ದೊಡ್ಡ ವ್ಯತ್ಯಾಸವಿದೆ. ಮೆಟ್ರೋದಲ್ಲಿ ಗರಿಷ್ಠ ಪ್ರಯಾಣ ದರ 90 ರೂ ಆಗಿದ್ದರೆ, ಟನಲ್ ರಸ್ತೆಯಲ್ಲಿ ಒಂದು ಸುತ್ತಿನ (ಹೋಗಿ-ಬರುವ) ಟೋಲ್ ಶುಲ್ಕ 600 ರೂಪಾಯಿಗೂ ಅಧಿಕ ಇರಬಹುದು ಎಂದು ಅಂದಾಜಿಸಲಾಗಿದೆ. ಜೊತೆಗೆ, ಈ ಸುರಂಗ ರಸ್ತೆಯಲ್ಲಿ ಎಲ್ಲ ರೀತಿಯ ವಾಹನಗಳಿಗೆ ಸಂಚಾರಕ್ಕೆ ಅವಕಾಶ ಇರುವುದಿಲ್ಲ. ಮೆಟ್ರೋ ಯೋಜನೆಯ ವೆಚ್ಚವೂ ಈ ಹಿಂದೆ ಪರಿಶೀಲನೆಗೆ ಒಳಗಾಗಿತ್ತು. 2024ರ ಡಿಸೆಂಬರ್‌ನಲ್ಲಿ ರಾಜ್ಯ ಸಚಿವ ಸಂಪುಟವು ಮೆಟ್ರೋ 3ಎ ಹಂತದ ಡಿಪಿಆರ್‌ಗೆ 28,405 ಕೋಟಿ ರೂ (ಪ್ರತಿ ಕಿ.ಮೀ.ಗೆ 776.3 ಕೋಟಿ) ವೆಚ್ಚದೊಂದಿಗೆ ಅನುಮೋದನೆ ನೀಡಿತ್ತು. ಇದು ಬೆಂಗಳೂರಿನಲ್ಲಿ ಪ್ರಸ್ತಾವಿಸಲಾದ ಅತ್ಯಂತ ದುಬಾರಿ ಮೆಟ್ರೋ ಹಂತವಾಗಿತ್ತು. ಎರಡೂ ಯೋಜನೆಗಳು ಸಾಮಾನ್ಯವಾಗಿ ಆಗ್ನೇಯ ಬೆಂಗಳೂರನ್ನು ನಗರದ ಉತ್ತರ ಭಾಗದೊಂದಿಗೆ ಸಂಪರ್ಕಿಸುವ ಒಂದೇ ಸಂಚಾರ ಮಾರ್ಗಕ್ಕೆ ಸಂಬಂಧಿಸಿದ್ದಾಗಿವೆ. ಆದರೆ, ಒಂದೆಡೆ 27 ನಿಲ್ದಾಣಗಳನ್ನು ಹೊಂದಿರುವ ಹೆಚ್ಚಿನ ಸಾಮರ್ಥ್ಯದ ಸಾರ್ವಜನಿಕ ಸಮೂಹ ಸಾರಿಗೆ ವ್ಯವಸ್ಥೆಯನ್ನು ಮೆಟ್ರೋ ಒದಗಿಸಲಿದ್ದರೆ, ಮತ್ತೊಂದೆಡೆ ಟೋಲ್ ಆಧಾರಿತ ಸುರಂಗ ರಸ್ತೆ ಮುಖ್ಯವಾಗಿ ವಾಹನ ಸಂಚಾರಕ್ಕಾಗಿ ಮಾತ್ರ ಉದ್ದೇಶಿತವಾಗಿದೆ.

> ಯೋಜನೆ ಪೂರ್ಣಗೊಳ್ಳುವ ವೇಳೆಗೆ ವೆಚ್ಚವು 45 ಶೇಕಡಾವರೆಗೆ ಹೆಚ್ಚಾಗುವ ಸಾಧ್ಯತೆ ಇರುವುದರಿಂದ, ಪ್ರತಿ ಕಿಲೋಮೀಟರ್ ವೆಚ್ಚವು ಸುಮಾರು 1,538 ಕೋಟಿ ರೂಪಾಯಿಗೆ ಏರಬಹುದು ಎಂದು ಅಂದಾಜಿಸಲಾಗಿದೆ. -ಡಿಪಿಆರ್

**ಪ್ರಯಾಣಿಕರ ಸಂಖ್ಯೆ ಕಡಿಮೆ**
ಪ್ರಯಾಣಿಕರ ಸಂಖ್ಯೆ ಕಡಿಮೆ ಇರಲಿದೆ ಎಂಬ ಅಂದಾಜಿನ ಹಿನ್ನೆಲೆಯಲ್ಲಿ ವೆಟರ್ನರಿ ಕಾಲೇಜು ಮೆಟ್ರೋ ನಿಲ್ದಾಣವನ್ನು ಕೈಬಿಡುವ ಮೂಲಕ, ಬೆಂಗಳೂರು ಮೆಟ್ರೋ ರೈಲು ನಿಗಮ (ಬಿಎಂಆರ್‌ಸಿಎಲ್) ಯೋಜನಾ ವೆಚ್ಚವನ್ನು 25,999 ಕೋಟಿ ರೂಪಾಯಿಗೆ ಇಳಿಸಿತು.

ಅಂತರಾಳದಿಂದ...
EDITORIAL

# ಜಿ ರಾಮ್ ಜಿ: ರಾಜ್ಯದ ಮನವಿ ಸಕಾರಾತ್ಮಕ ಪರಿಗಣನೆಯಾಗಲಿ



ಮನರೇಗಾ ಯೋಜನೆಗೆ 2 ದಶಕಗಳ ಬಳಿಕ ತಾರ್ಕಿಕ ಅಂತ್ಯ ಹಾಡಿ, ಅದರ ಜಾಗದಲ್ಲಿ ಕೇಂದ್ರ ಸರಕಾರವು ವಿಕಸಿತ ಭಾರತ-ಗ್ಯಾರಂಟಿ ಫಾರ್ ರೋಜ್‌ಗಾರ್ - ಆಜೀವಿಕಾ ಮಿಷನ್-ಗ್ರಾಮೀಣ' (ವಿಬಿ-ಜಿ ರಾಮ್ ಜಿ) ಯೋಜನೆಯನ್ನು ಜಾರಿಗೆ ತಂದಿದೆ. ಹೊಸ ಯೋಜನೆಯು ಗ್ರಾಮೀಣ ಭಾಗದಲ್ಲಿ ಸುಸ್ಥಿರ ಆಸ್ತಿ ಸೃಜನೆ ಮತ್ತು ಪಿಎಂ-ಗತಿಶಕ್ತಿ' ಅಡಿಯಲ್ಲಿ ಅಭಿವೃದ್ಧಿಯ ದೂರದೃಷ್ಟಿ ಹೊಂದಿದ್ದರೂ ಸ್ಥಳೀಯ ಮಟ್ಟದ ಅಗತ್ಯಗಳನ್ನು ಸಂಪೂರ್ಣವಾಗಿ ಪ್ರತಿಬಿಂಬಿಸುತ್ತಿಲ್ಲ ಎಂಬ ಆತಂಕಗಳು ಈಗ ಎದುರಾಗಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರವು ರಾಜ್ಯದ ಭೌಗೋಳಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಇನ್ನೂ 25 ಕಾಮಗಾರಿಗಳನ್ನು ಸೇರಿಸುವಂತೆ ಕೇಂದ್ರಕ್ಕೆ ಸಲ್ಲಿಸಿರುವ ಮನವಿಯು ತಾರ್ಕಿಕ ಹಾಗೂ ಅಗತ್ಯ ಕ್ರಮವಾಗಿದೆ. ಇಂತಹ ಸಂದರ್ಭಗಳಲ್ಲಿ ದೊಡ್ಡ ಮಟ್ಟದ ಮಾನವ ಶ್ರಮ ಬೇಡುವ ಅರಣ್ಯದಂಚಿನ ಕಂದಕ ನಿರ್ಮಾಣ, ಹೊಲಗಳ ಬದು ನಿರ್ಮಾಣ ಅಥವಾ ಕೆರೆಗಳ ಹೂಳೆತ್ತುವಿಕೆಯಂತಹ ಸಾಂಪ್ರದಾಯಿಕ ಕಾಮಗಾರಿಗಳು ಲಕ್ಷಾಂತರ ಜನರಿಗೆ ಆಸರೆಯಾಗುತ್ತಿದ್ದವು. ಹೊಸ ಯೋಜನೆಯಲ್ಲಿ ಇಂತಹ ಕೆಲವು ಕಾಮಗಾರಿಗಳನ್ನು ಕೈಬಿಟ್ಟಿರುವುದು ಅಥವಾ ಸೀಮಿತಗೊಳಿಸಿರುವುದು ಗ್ರಾಮೀಣ ಗುಳೇಯನ್ನು ಹೆಚ್ಚಿಸುವ ಸಾಧ್ಯತೆ ದಟ್ಟವಾಗಿದೆ.

**ಉದ್ಯೋಗ ಆಧಾರಿತ ಯೋಜನೆಯನ್ನು ಮೂಲಸೌಕರ್ಯ**

**ಹೊಸ ಯೋಜನೆಯಲ್ಲಿ ಕಾಮಗಾರಿಗಳ ಸಂಖ್ಯೆಯನ್ನು 260ರಿಂದ 318ಕ್ಕೆ ಹೆಚ್ಚಿಸಿರುವುದು ಮೇಲ್ನೋಟಕ್ಕೆ ಪ್ರಗತಿಪರ ಹೆಜ್ಜೆಯಾಗಿ ಕಾಣಬಹುದು. ಆದರೆ, ಈ ಬಹುತೇಕ ಕೆಲಸಗಳು ಕಡಿಮೆ ಸಂಖ್ಯೆಯ ಕೂಲಿಕಾರ್ಮಿಕರನ್ನು ಬೇಡುತ್ತವೆ ಎಂಬುದು ವಾಸ್ತವ.**

**ನರೇಗಾ ಯೋಜನೆಯ ಮೂಲ ಉದ್ದೇಶವೇ ಗ್ರಾಮೀಣ ಬಡವರಿಗೆ ಹಸಿವು ಮುಕ್ತ ಬದುಕು ನೀಡುವುದು ಮತ್ತು ದೈಹಿಕ ಶ್ರಮದ ಉದ್ಯೋಗ ಒದಗಿಸುವುದಾಗಿತ್ತು.**

**ಈಗ ಜಿ ರಾಮ್ ಜಿ ಯೋಜನೆಯಡಿ ತಾಂತ್ರಿಕ ಹಾಗೂ ಯಾಂತ್ರೀಕೃತ ಆಸ್ತಿ ಸೃಜನೆಗೆ ಹೆಚ್ಚಿನ ಒತ್ತು ನೀಡಲು ಹೊರಟಿರುವುದರಿಂದ ಉದ್ಯೋಗ ಆಧಾರಿತ ಯೋಜನೆಯನ್ನು ಮೂಲಸೌಕರ್ಯ ಯೋಜನೆಯನ್ನಾಗಿ ಪರಿವರ್ತಿಸಿದಂತಾಗುವ ಅಪಾಯವಿದೆ.**

**ವಿಶೇಷವಾಗಿ ಕರ್ನಾಟಕದ, ಅದರಲ್ಲೂ ಉತ್ತರ ಕರ್ನಾಟಕ ಭಾಗದಲ್ಲಿ ಬರಗಾಲ ಅಥವಾ ಕೃಷಿ ರಹಿತ ದಿನಗಳಲ್ಲಿ ಒಮ್ಮೆಗೆ ಸಾವಿರಾರು ಕೂಲಿ ಕಾರ್ಮಿಕರು ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸುತ್ತಾರೆ.**

ರಾಜ್ಯ ಸರಕಾರವು ಪ್ರಸ್ತಾವಿಸಿರುವ 25 ಕಾಮಗಾರಿಗಳ ಪಟ್ಟಿಯಲ್ಲಿ ಬಸವ, ಅಂಬೇಡ್ಕರ್, ದೇವರಾಜ ಅರಸು ವಸತಿ ಯೋಜನೆಗಳು, ಗ್ರಾಮೀಣ ಆಟದ ಮೈದಾನಗಳು, ಕುಡಿಯುವ ನೀರಿನ ಬಾವಿ ಹಾಗೂ ಕೃಷಿ ಹೊಂಡಗಳ ನಿರ್ವಹಣೆಯಂತಹ ಅತ್ಯಗತ್ಯ ಕೆಲಸಗಳಿವೆ. ಇವು ಕೇವಲ ಉದ್ಯೋಗ ಸೃಷ್ಟಿಯಷ್ಟೇ ಅಲ್ಲದೇ, ಗ್ರಾಮೀಣ ಮೂಲಸೌಕರ್ಯ ಮತ್ತು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವ ಶಕ್ತಿ ಹೊಂದಿವೆ. ಕೃಷಿ ಚಟುವಟಿಕೆಯ ಸಮಯದಲ್ಲಿ ಯೋಜನೆಗೆ 60 ದಿನಗಳ ವಿರಾಮ ಇರುವುದರಿಂದ ಕೃಷಿ ಬಿತ್ತನೆ ಮತ್ತು ಕೊಯ್ದು ಕೆಲಸಗಳನ್ನು ಇದಕ್ಕೆ ಸೇರಿಸಲು ಕೇಂದ್ರ ಹಿಂಜರಿಯುತ್ತಿರುವುದು ಸಹಜ. ಆದರೂ ಸ್ಥಳೀಯ ಹವಾಮಾನ ವೈಪರೀತ್ಯಗಳ ಸಂದರ್ಭದಲ್ಲಿ ಈ ನಿಯಮಗಳು ಸಡಿಲಗೊಳ್ಳಬೇಕಾದ ಅಗತ್ಯವಿದೆ. ವಿಕಸಿತ ಭಾರತದ ಗುರಿ ಕೇವಲ ಭವ್ಯವಾದ ಕಟ್ಟಡ ಅಥವಾ ಅದು ದೇಶದ ಕಟ್ಟಕಡೆಯ ಹಳ್ಳಿಯ ಬಡವನ ಹೊಟ್ಟೆ ತುಂಬಿಸುವುದರಲ್ಲೂ ಇದೆ. ಕೇಂದ್ರ ಸರಕಾರವು ಒಕ್ಕೂಟ ವ್ಯವಸ್ಥೆಯ ಆಶಯಕ್ಕೆ ಗೌರವ ನೀಡಿ, ಕರ್ನಾಟಕ ಸರಕಾರದ ಪ್ರಸ್ತಾವನೆಯನ್ನು ಸಕಾರಾತ್ಮಕವಾಗಿ ಪರಿಗಣಿಸಬೇಕು. ಆ ಮೂಲಕ ಹೊಸ ಜಿ ರಾಮ್ ಜಿ' ಯೋಜನೆ ಕೇವಲ ಅಂಕಿ-ಅಂಶಗಳ ವಿಕಸನವಾಗದೆ, ನಿಜವಾದ ಅರ್ಥದಲ್ಲಿ ಗ್ರಾಮೀಣ ಉದ್ಯೋಗದ ಗ್ಯಾರಂಟಿಯಾಗಬೇಕಿದೆ.



**ವಿದ್ಯಾರ್ಥಿ ವಿಜಯ**

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

23

# ನಿನ್ನದೇ ಟಿಪ್ಪಣಿ ನಿನ್ನದೇ ಗೆಲುವು

ವಿದ್ಯಾರ್ಥಿಯ ಜೀವನದಲ್ಲಿ ವಿಜಯ ಸಾಧಿಸಲು ಏಕಾಗ್ರತೆ ಮತ್ತು ಸಕ್ರಿಯ ಕಲಿಕೆ ಅತ್ಯಂತ ಅಗತ್ಯ. ಈ ಗುರಿಯನ್ನು ಸಾಧಿಸಲು ''ನಿನ್ನದೇ ಟಿಪ್ಪಣಿ ನಿನ್ನದೇ ಗೆಲುವು'' ಎಂಬ ಅಭ್ಯಾಸ ಬಹಳ ಪರಿಣಾಮಕಾರಿ. ವಿದ್ಯಾರ್ಥಿ ಇತರರ ನೋಟ್ಸ್‌ಗಳನ್ನು ಮಾತ್ರ ಅವಲಂಬಿಸದೆ, ತಾನೇ ಕಲಿತ ವಿಷಯವನ್ನು ತನ್ನದೇ ಶಬ್ದಗಳಲ್ಲಿ ಬರೆಯಬೇಕು.

ವೈಜ್ಞಾನಿಕವಾಗಿ ನೋಡಿದರೆ, ಸ್ವಂತವಾಗಿ ಬರೆಯುವ ಪ್ರಕ್ರಿಯೆ ಮೆದುಳಿನ ಹಲವು ಭಾಗಗಳನ್ನು ಸಕ್ರಿಯಗೊಳಿಸುತ್ತದೆ. ಇದು ಕೇವಲ ಓದುವುದಕ್ಕಿಂತ ಹೆಚ್ಚು ಪರಿಣಾಮಕಾರಿ ಕಲಿಕೆಯನ್ನು ನೀಡುತ್ತದೆ. ಬರವಣಿಗೆಯ ಮೂಲಕ ಮಾಹಿತಿಯ ಪುನರಾವರ್ತನೆ ನರಸಂಪರ್ಕಗಳನ್ನು ಬಲಪಡಿಸಿ ದೀರ್ಘಕಾಲದ ನೆನಪನ್ನು ನಿರ್ಮಿಸುತ್ತದೆ.

ನಿನ್ನದೇ ಟಿಪ್ಪಣಿ ಬರೆಯುವ ವಿದ್ಯಾರ್ಥಿ ಹೆಚ್ಚು ಏಕಾಗ್ರತೆಯಿಂದ ಕಲಿಯುತ್ತಾನೆ ಮತ್ತು ವಿಷಯವನ್ನು ಆಳವಾಗಿ ಅರ್ಥಮಾಡಿಕೊಳ್ಳುತ್ತಾನೆ. ಅವನಲ್ಲಿ ಆತ್ಮವಿಶ್ವಾಸ, ವಿಶ್ಲೇಷಣಾ ಸಾಮರ್ಥ್ಯ ಮತ್ತು ಶಿಸ್ತು ಬೆಳೆಯುತ್ತದೆ.

ಹೀಗಾಗಿ ಈ ಅಭ್ಯಾಸವು ವಿದ್ಯಾರ್ಥಿಯ ಯಶಸ್ಸಿಗೆ ಸರಳ ಆದರೆ ಶಕ್ತಿಯುತ ಮಾರ್ಗವಾಗಿದೆ.

**ವಿದ್ಯಾರ್ಥಿ ಪಾಠವನ್ನು ಓದಿದ ನಂತರ ಮುಖ್ಯ ಅಂಶಗಳನ್ನು ಸಂಕ್ಷಿಪ್ತವಾಗಿ ಟಿಪ್ಪಣಿ ರೂಪದಲ್ಲಿ ಬರೆಯಬೇಕು. ಸರಳ ಭಾಷೆ, ಪ್ರಮುಖ ಪದಗಳು ಮತ್ತು ಸಣ್ಣ ವಾಕ್ಯಗಳನ್ನು ಬಳಸಿದರೆ ಕಲಿಕೆ ಸುಲಭವಾಗುತ್ತದೆ. ಅಗತ್ಯವಿದ್ದರೆ ಚಿತ್ರಗಳು, ರೇಖಾಚಿತ್ರಗಳು ಅಥವಾ ಬಣ್ಣಗಳ ಬಳಕೆ ಮಾಡಿದರೆ ನೆನಪಿನ ಶಕ್ತಿ ಹೆಚ್ಚುತ್ತದೆ. ಇದರಿಂದ ವಿಷಯವನ್ನು ಮತ್ತೆ ಓದುವುದು ವೇಗವಾಗುತ್ತದೆ ಮತ್ತು ಸ್ಪಷ್ಟತೆ ಬರುತ್ತದೆ.**




**ಸ್ಥಳೀಯರಿಗೆ ಉದ್ಯೋಗಾವಕಾಶಗಳು ದೇವಸ್ಥಾನ ಪ್ರವಾಸೋದ್ಯಮದ ಬೆಳವಣಿಗೆಯಿಂದ ಸ್ಥಳೀಯರಿಗೆ ಹಲವು ರೀತಿಯ ಉದ್ಯೋಗಗಳು ದೊರೆಯುತ್ತವೆ. ಪ್ರವಾಸಿ ಮಾರ್ಗದರ್ಶಕರಾಗಿ ಕೆಲಸ ಮಾಡುವ ಅವಕಾಶ.**



ಲೇಖಕರು
ಚನ್ನೇಗೌಡ ಉಜ್ಜನಿ ಚಲುವಯ್ಯ
ಲೇಖಕರು,
ಕನ್ನಡ ಪರ ಚಿಂತಕರು

# ಮುಜರಾಯಿ ಇಲಾಖೆಯಡಿಯಲ್ಲಿ ಬರುವ ದೇವಸ್ಥಾನಗಳನ್ನು ಪ್ರವಾಸೋದ್ಯಮ ತಾಣವನ್ನಾಗಿಸಿ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವ ಆದೇಶ ಜಾರಿಗೊಳಿಸಿ

ನಮ್ಮ ನೆಲ ದೇವಾಲಯಗಳ ಸಮೃದ್ಧ ನಾಡು ಎಂದು ಪ್ರಸಿದ್ಧವಾಗಿದೆ. ಕರ್ನಾಟಕದಲ್ಲಿ ಮುಜರಾಯಿ ಇಲಾಖೆಯ ಅಧೀನದಲ್ಲಿರುವ ಸಾವಿರಾರು ದೇವಾಲಯಗಳು ಧಾರ್ಮಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವವನ್ನು ಹೊಂದಿವೆ. ಈ ದೇವಾಲಯಗಳು ಕೇವಲ ಭಕ್ತಿಯ ಕೇಂದ್ರಗಳಷ್ಟೇ ಅಲ್ಲದೆ, ಪ್ರವಾಸೋದ್ಯಮದ ಮೂಲಕ ಆರ್ಥಿಕ ಅಭಿವೃದ್ಧಿಗೆ ಕಾರಣವಾಗುವ ಅಮೂಲ್ಯ ಸಂಪತ್ತಾಗಿವೆ.

ಇವುಗಳನ್ನು ಸಮರ್ಪಕವಾಗಿ ಅಭಿವೃದ್ಧಿ ಪಡಿಸಿದರೆ ಸ್ಥಳೀಯ ಯುವಕರಿಗೆ ಉದ್ಯೋಗಾವಕಾಶಗಳು ಹೆಚ್ಚುವುದರ ಜೊತೆಗೆ ಗ್ರಾಮೀಣ ಅಭಿವೃದ್ಧಿಗೂ ಹೊಸ ದಿಕ್ಕು ದೊರೆಯುತ್ತದೆ. ದೇವಸ್ಥಾನಗಳನ್ನು ಪ್ರವಾಸೋದ್ಯಮ ತಾಣಗಳನ್ನಾಗಿಸುವ ಅಗತ್ಯ ದೇವಾಲಯಗಳು ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಇತಿಹಾಸದ ಪ್ರತೀಕಗಳಾಗಿವೆ. ಅನೇಕ ದೇವಾಲಯಗಳು ಸುಂದರವಾದ ಪ್ರಕೃತಿ ಪರಿಸರದಲ್ಲಿದ್ದು ದೇಶ-ವಿದೇಶದ ಪ್ರವಾಸಿಗರನ್ನು ಆಕರ್ಷಿಸುವ ಸಾಮರ್ಥ್ಯ ಹೊಂದಿವೆ. ಮೂಲಭೂತ ಸೌಲಭ್ಯಗಳು, ಸ್ವಚ್ಛತೆ, ಉತ್ತಮ ರಸ್ತೆ, ವಸತಿ, ಕುಡಿಯುವ ನೀರು, ಶೌಚಾಲಯ ಹಾಗೂ ಮಾಹಿತಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಿದರೆ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತದೆ.

ಹೋಟೆಲ್, ಊಟದ ಮನೆ, ಲಾಡ್ಜ್ ಹಾಗೂ ಹೋಂ ಸ್ಟೇಗಳ ನಿರ್ವಹಣೆ. ಪ್ರಸಾದ, ಹೂವು, ಪೂಜಾ ಸಾಮಗ್ರಿಗಳು ಮತ್ತು ಸ್ಥಳೀಯ ಉತ್ಪನ್ನಗಳ ಮಾರಾಟ. ಕೈಗಾರಿಕಾ ವಸ್ತುಗಳು, ಕರಕುಶಲ ವಸ್ತುಗಳು ಹಾಗೂ ಸ್ಮರಣಿಕೆಗಳ ವ್ಯಾಪಾರ. ಸಾರಿಗೆ ಸೇವೆಗಳು, ಆಟೋ, ಟ್ಯಾಕ್ಸಿ ಮತ್ತು ಪ್ರವಾಸಿ ವಾಹನಗಳ ಸೇವೆ. ಸ್ವಚ್ಛತೆಯ ವ್ಯವಸ್ಥೆ, ಮಹಿಳೆಯರಿಗೆ ಮಕ್ಕಳಿಗೆ, ವೃದ್ಧರಿಗೆ ವಿಶೇಷ ಭದ್ರತೆ, ಉದ್ಯಾನ ನಿರ್ವಹಣೆ ಹಾಗೂ ನಿರ್ವಹಣಾ ಸಿಬ್ಬಂದಿಯಾಗಿ ಉದ್ಯೋಗ.

ಸಾಂಸ್ಕೃತಿಕ ಕಾರ್ಯಕ್ರಮಗಳು, ಜನಪದ ಕಲೆ ಮತ್ತು ಸಂಗೀತ ಪ್ರದರ್ಶನಗಳ ಮೂಲಕ ಕಲಾವಿದರಿಗೆ ಆದಾಯ. ಅಭಿವೃದ್ಧಿಗೆ ಕೈಗೊಳ್ಳಬೇಕಾದ ಕ್ರಮಗಳು ದೇವಾಲಯಗಳ ಸಂರಕ್ಷಣೆ ಮತ್ತು ಜೀರ್ಣೋದ್ಧಾರ ವ್ಯವಸ್ಥೆ ಸುಗಮ. ಉತ್ತಮ ರಸ್ತೆ ಹಾಗೂ ಸಾರಿಗೆ ವ್ಯವಸ್ಥೆಯ ಅನುಕೂಲ. ಡಿಜಿಟಲ್ ಮಾಹಿತಿ ಕೇಂದ್ರಗಳು ಮತ್ತು ಬಹುಭಾಷಾ ಮಾರ್ಗದರ್ಶನ ನೀಡುವುದು. ಪರಿಸರ ಸ್ನೇಹಿ ಪ್ರವಾಸೋದ್ಯಮಕ್ಕೆ ಹಸಿರು ಸ್ವಚ್ಛತೆಯ ಆದ್ಯತೆ. ಸ್ಥಳೀಯ ಯುವಕರಿಗೆ ಪ್ರವಾಸೋದ್ಯಮ ಮತ್ತು ಆತಿಥ್ಯ ಕ್ಷೇತ್ರದಲ್ಲಿ ತರಬೇತಿ. ಮಹಿಳಾ ಸ್ವಸಹಾಯ ಸಂಘಗಳಿಗೆ ಅಂಗಡಿಗಳು ಹಾಗೂ ಆಹಾರ ಮಳಿಗೆಗಳ ಅವಕಾಶ. ವಾರ್ಷಿಕ ಜಾತ್ರೆಗಳು, ಉತ್ಸವಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಭವ್ಯ ಆಯೋಜನೆ. ದೇವಾಲಯಗಳ ಇತಿಹಾಸ ಮತ್ತು ವಿಶೇಷತೆಯನ್ನು ಪ್ರಚಾರ ಸ್ಥಳೀಯ ಆರ್ಥಿಕತೆ ಬಲಗೊಳ್ಳುತ್ತದೆ. ಯುವಕರಿಗೆ ಸ್ವಯಂ ಉದ್ಯೋಗದ ಅವಕಾಶಗಳು ಹೆಚ್ಚುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳು ಅಭಿವೃದ್ಧಿಯಾಗುತ್ತವೆ. ಸಾಂಸ್ಕೃತಿಕ ಪರಂಪರೆ ಸಂರಕ್ಷಣೆ ಸಾಧ್ಯವಾಗುತ್ತದೆ. ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಉತ್ತೇಜನ ಸಿಗುತ್ತದೆ.

ರಾಜ್ಯದ ಪ್ರವಾಸೋದ್ಯಮ ಆದಾಯ ಹೆಚ್ಚುತ್ತದೆ. ದೇಶ-ವಿದೇಶದ ಪ್ರವಾಸಿಗರ ಸಂಖ್ಯೆ ವೃದ್ಧಿಯಾಗುತ್ತದೆ.

ಸರ್ಕಾರ ಮತ್ತು ಸಾರ್ವಜನಿಕರ ಪಾತ್ರ ಸರ್ಕಾರವು ದೇವಾಲಯಗಳ ಅಭಿವೃದ್ಧಿಗೆ ಅಗತ್ಯ ಅನುದಾನ, ಮೂಲಸೌಕರ್ಯ ಹಾಗೂ ಯೋಜನೆಗಳನ್ನು ಜಾರಿಗೊಳಿಸಬೇಕು. ಸಾರ್ವಜನಿಕರು ದೇವಾಲಯಗಳ ಸ್ವಚ್ಛತೆ, ಪರಿಸರ ಸಂರಕ್ಷಣೆ ಮತ್ತು ಪ್ರವಾಸಿಗರಿಗೆ ಉತ್ತಮ ಆತಿಥ್ಯ ನೀಡುವ ಮೂಲಕ ಸಹಕರಿಸಬೇಕು. ಸ್ಥಳೀಯ ಸಂಸ್ಥೆಗಳು, ಸ್ವಯಂಸೇವಾ ಸಂಘಗಳು ಮತ್ತು ಖಾಸಗಿ ವಲಯವೂ ಈ ಕಾರ್ಯದಲ್ಲಿ ಪಾಲುದಾರರಾಗಬೇಕು.

ಉಪಸಂಹಾರ ಮುಜರಾಯಿ ಇಲಾಖೆಯಡಿಯಲ್ಲಿ ಬರುವ ದೇವಸ್ಥಾನಗಳನ್ನು ಯೋಜಿತವಾಗಿ ಪ್ರವಾಸೋದ್ಯಮ ತಾಣಗಳಾಗಿ ಅಭಿವೃದ್ಧಿಪಡಿಸುವುದರಿಂದ ಧಾರ್ಮಿಕ ಪ್ರವಾಸೋದ್ಯಮಕ್ಕೆ ಹೊಸ ಆಯಾಮ ಸಿಗುತ್ತದೆ.

ಇದರಿಂದ ಸ್ಥಳೀಯರಿಗೆ ಉದ್ಯೋಗ, ವ್ಯಾಪಾರ ಹಾಗೂ ಸ್ವಯಂ ಉದ್ಯೋಗದ ಅವಕಾಶಗಳು ಹೆಚ್ಚುತ್ತವೆ. ಜೊತೆಗೆ ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಐತಿಹಾಸಿಕ ದೇವಾಲಯಗಳು ಸಂರಕ್ಷಿಸಲ್ಪಡುತ್ತವೆ. ಆದ್ದರಿಂದ ದೇವಾಲಯಗಳ ಅಭಿವೃದ್ಧಿ ಸ್ಥಳೀಯರ ಅಭಿವೃದ್ಧಿ ರಾಜ್ಯದ ಸಮೃದ್ಧಿ ಎಂಬ ಧ್ಯೇಯದೊಂದಿಗೆ ಸರ್ಕಾರ ಮತ್ತು ಸಾರ್ವಜನಿಕರು ಕೈಜೋಡಿಸಿದರೆ ಕರ್ನಾಟಕವು ಧಾರ್ಮಿಕ ಹಾಗೂ ಸಾಂಸ್ಕೃತಿಕ ಪ್ರವಾಸೋದ್ಯಮದಲ್ಲಿ ದೇಶಕ್ಕೆ ಮಾದರಿಯಾಗಬಹುದು.





ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# ಬದಲಾಗುತ್ತಿರುವ ವಿವಾಹದ ಧೋರಣೆ: ಸ್ವಾತಂತ್ರ್ಯ, ಶಿಕ್ಷಣ ಮತ್ತು ಸಾಮಾಜಿಕ ಸಮತೋಲನದ ಹುಡುಕಾಟ

**ಇಂದಿನ ಯುವತಿಯರು ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡುತ್ತಿದ್ದಾರೆ. ಆರ್ಥಿಕವಾಗಿ ಸ್ವಾವಲಂಬಿಗಳಾಗಿರುವ ಅವರು ತಮ್ಮ ಜೀವನದ ಪ್ರಮುಖ ನಿರ್ಧಾರಗಳನ್ನು ಸ್ವತಂತ್ರವಾಗಿ ತೆಗೆದುಕೊಳ್ಳಲು ಬಯಸುವುದು ಸಹಜ.**

ಇತ್ತೀಚಿನ ದಿನಗಳಲ್ಲಿ ವಿವಾಹದ ಬಗ್ಗೆ ಯುವಜನರ ಮನೋಭಾವದಲ್ಲಿ ಮಹತ್ವದ ಬದಲಾವಣೆಗಳು ಕಂಡುಬರುತ್ತಿವೆ. ಉನ್ನತ ಶಿಕ್ಷಣ, ಉದ್ಯೋಗಾವಕಾಶಗಳು, ಆರ್ಥಿಕ ಸ್ವಾವಲಂಬನೆ, ವೈಯಕ್ತಿಕ ಸ್ವಾತಂತ್ರ್ಯ ಮತ್ತು ಜೀವನಶೈಲಿಯ ಬದಲಾವಣೆಗಳು ವಿವಾಹದ ವಯಸ್ಸು ಹಾಗೂ ಅದರ ಬಗ್ಗೆ ಇರುವ ದೃಷ್ಟಿಕೋನವನ್ನು ಬದಲಿಸುತ್ತಿವೆ. ಈ ಹಿನ್ನೆಲೆಯಲ್ಲಿ ಕೆಲ ಅಂತರರಾಷ್ಟ್ರೀಯ ಅಧ್ಯಯನಗಳು ಮುಂದಿನ ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯ ಮಹಿಳೆಯರು ಅವಿವಾಹಿತರಾಗಿಯೇ ಉಳಿಯುವ ಸಾಧ್ಯತೆಯ ಬಗ್ಗೆ ಚರ್ಚೆ ಮಾಡಿವೆ. ಆದರೆ ಇಂತಹ ಅಂಕಿಅಂಶಗಳನ್ನು ಅಂತಿಮ ಸತ್ಯವೆಂದು ಪರಿಗಣಿಸುವ ಬದಲು, ಅವುಗಳ ಹಿಂದಿರುವ ಸಾಮಾಜಿಕ ಕಾರಣಗಳನ್ನು ಅರ್ಥಮಾಡಿಕೊಳ್ಳುವುದು ಹೆಚ್ಚು ಮುಖ್ಯ. ಇದು ಸಮಾಜದ ಪ್ರಗತಿಯ ಒಂದು ಸಕಾರಾತ್ಮಕ ಲಕ್ಷಣವಾಗಿದೆ. ಮಹಿಳೆಯರ ಶಿಕ್ಷಣ ಮತ್ತು ಸ್ವಾವಲಂಬನೆಯು ಕುಟುಂಬದಷ್ಟೇ ದೇಶದ ಅಭಿವೃದ್ಧಿಗೂ ಮಹತ್ವದ ಕೊಡುಗೆ ನೀಡುತ್ತದೆ. ಇನ್ನೊಂದೆಡೆ, ವಿವಾಹದ ನಂತರ ಕುಟುಂಬದ ಜವಾಬ್ದಾರಿಗಳು, ಉದ್ಯೋಗ ಮತ್ತು ವೈಯಕ್ತಿಕ ಬದುಕಿನ ನಡುವೆ ಸಮತೋಲನ ಸಾಧಿಸುವ ಸವಾಲು ಅನೇಕ ಯುವತಿಯರನ್ನು ಯೋಚಿಸುವಂತೆ ಮಾಡುತ್ತಿದೆ. ಅದೇ ರೀತಿ ಕೆಲವು ಯುವಕರೂ ಸಹ ಆರ್ಥಿಕ ಸ್ಥಿರತೆ, ಉದ್ಯೋಗದ




ಅನಿಶ್ಚಿತತೆ ಮತ್ತು ಜೀವನದ ಒತ್ತಡಗಳಿಂದ ವಿವಾಹವನ್ನು ಮುಂದೂಡುತ್ತಿದ್ದಾರೆ. ಹೀಗಾಗಿ ಈ ಬದಲಾವಣೆಯನ್ನು ಕೇವಲ ಮಹಿಳೆಯರ ದೃಷ್ಟಿಕೋನದಿಂದ ನೋಡುವುದು ಸಮಂಜಸವಲ್ಲ. ಪೋಷಕರ ಮನೋಭಾವವೂ ಬದಲಾಗಿದೆ.

ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ, ಸ್ಥಿರ ಉದ್ಯೋಗ ಮತ್ತು ಭದ್ರ ಭವಿಷ್ಯ ಸಿಗಲಿ ಎಂಬ ಆಶಯದಿಂದ ವಿವಾಹದ ನಿರ್ಧಾರವನ್ನು ಮುಂದೂಡುತ್ತಾರೆ. ಕೆಲ ಸಂದರ್ಭಗಳಲ್ಲಿ ಅತಿಯಾದ ನಿರೀಕ್ಷೆಗಳು, ಸೂಕ್ತ ಜೀವನ ಸಂಗಾತಿಯ ಹುಡುಕಾಟ ಮತ್ತು ಸಾಮಾಜಿಕ ಮಾನದಂಡಗಳೂ ತಡವಾಗಲು ಕಾರಣವಾಗುತ್ತವೆ.ಇದಕ್ಕೆ ಜೊತೆಯಾಗಿ ಸಾಮಾಜಿಕ ಮಾಧ್ಯಮಗಳು ಮತ್ತು ಡಿಜಿಟಲ್ ಜೀವನಶೈಲಿಯ ಪ್ರಭಾವವೂ ಹೆಚ್ಚಾಗಿದೆ. ಸಂಬಂಧಗಳ ಬಗ್ಗೆ ಜನರ ನಿರೀಕ್ಷೆಗಳು ಬದಲಾಗಿವೆ. ಪರಸ್ಪರ ಗೌರವ, ಸಮಾನತೆ, ವೈಯಕ್ತಿಕ ಸ್ವಾತಂತ್ರ್ಯ ಮತ್ತು ಮಾನಸಿಕ ಹೊಂದಾಣಿಕೆಗೆ ಹೆಚ್ಚು ಮಹತ್ವ ನೀಡಲಾಗುತ್ತಿದೆ. ಇವು ಸಕಾರಾತ್ಮಕ ಬೆಳವಣಿಗೆಗಳಾಗಿದ್ದರೂ, ಕೆಲವೊಮ್ಮೆ ಅತಿಯಾದ ನಿರೀಕ್ಷೆಗಳು ಸಂಬಂಧಗಳನ್ನು ಕಟ್ಟಿಕೊಳ್ಳುವುದನ್ನು ಕಷ್ಟಕರವಾಗಿಸಬಹುದು.


ವಿವಾಹ ಎನ್ನುವುದು ಕೇವಲ ಸಾಮಾಜಿಕ ಸಂಪ್ರದಾಯವಲ್ಲ ಅದು ಪರಸ್ಪರ ವಿಶ್ವಾಸ, ಪ್ರೀತಿ, ಸಹಕಾರ ಮತ್ತು ಜವಾಬ್ದಾರಿಯ ಜೀವನಯಾನ. ಅದೇ ಸಮಯದಲ್ಲಿ ವಿವಾಹ ಮಾಡಬೇಕೋ ಬೇಡವೋ, ಯಾವಾಗ ಮಾಡಬೇಕೋ ಎಂಬುದು ಪ್ರತಿಯೊಬ್ಬ ವ್ಯಕ್ತಿಯ ವೈಯಕ್ತಿಕ ನಿರ್ಧಾರವಾಗಿದೆ. ಯಾವುದೇ ನಿರ್ಧಾರವೂ ಪರಸ್ಪರ ಗೌರವ, ಸ್ವಇಚ್ಛೆ ಮತ್ತು ಸಮಗ್ರ ಮಾಹಿತಿಯ ಆಧಾರದ ಮೇಲೆ ಆಗಬೇಕು.

ಹೀಗಾಗಿ ಸಮಾಜವು ಒಂದೆಡೆ ಶಿಕ್ಷಣ, ಸ್ವಾವಲಂಬನೆ ಮತ್ತು ಮಹಿಳಾ ಸಬಲೀಕರಣವನ್ನು ಉತ್ತೇಜಿಸುವುದರ ಜೊತೆಗೆ, ಮತ್ತೊಂದೆಡೆ ಆರೋಗ್ಯಕರ ಕುಟುಂಬ ಸಂಬಂಧಗಳು, ಪರಸ್ಪರ ಅರ್ಥೈಸಿಕೊಳ್ಳುವ ಮನೋಭಾವ ಮತ್ತು ಜೀವನ ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸಬೇಕು. ವಿವಾಹವನ್ನು ಒತ್ತಾಯವಾಗಿ ಅಥವಾ ಸ್ಪರ್ಧೆಯಾಗಿ ನೋಡುವುದಕ್ಕಿಂತ, ಜೀವನದ ಒಂದು ಜವಾಬ್ದಾರಿಯುತ ಆಯ್ಕೆಯಾಗಿ ಪರಿಗಣಿಸುವ ಮನೋಭಾವ ಬೆಳೆಸಬೇಕು.ಕೊನೆಗೆ, ಸಮಾಜದ ಅಭಿವೃದ್ಧಿಯನ್ನು ವಿವಾಹದ ಪ್ರಮಾಣದಿಂದ ಮಾತ್ರ ಅಳೆಯಲು ಸಾಧ್ಯವಿಲ್ಲ.

ವ್ಯಕ್ತಿಗಳ ಸ್ವಾತಂತ್ರ್ಯ, ಕುಟುಂಬದ ಮೌಲ್ಯಗಳು, ಸಾಮಾಜಿಕ ಹೊಣೆಗಾರಿಕೆ ಮತ್ತು ಪರಸ್ಪರ ಗೌರವದ ನಡುವೆ ಸಮತೋಲನ ಸಾಧಿಸಿದಾಗ ಮಾತ್ರ ಆರೋಗ್ಯಕರ ಸಮಾಜ ನಿರ್ಮಾಣವಾಗುತ್ತದೆ.

ಬದಲಾಗುತ್ತಿರುವ ಕಾಲದೊಂದಿಗೆ ನಮ್ಮ ಚಿಂತನೆಯೂ ಬೆಳೆಯಬೇಕು; ಆದರೆ ನಮ್ಮ ಸಂಸ್ಕೃತಿ, ಮಾನವೀಯ ಮೌಲ್ಯಗಳು ಮತ್ತು ಸಂಬಂಧಗಳ ಮಹತ್ವವನ್ನು ಎಂದಿಗೂ ಮರೆಯಬಾರದು.

# ರಾತ್ರಿ ಈ ಆಹಾರಗಳನ್ನು ಸೇವಿಸುತ್ತೀರಾ? ಆರೋಗ್ಯಕ್ಕೆ ಅಪಾಯ ಸಾಧ್ಯತೆ- ತಜ್ಞರ ಎಚ್ಚರಿಕೆ



ಕೆಲವರು ತಡರಾತ್ರಿ ಊಟ ಮಾಡುತ್ತಾರೆ. ಮತ್ತೆ ಕೆಲವು ಜನರು ಮನೆಯಲ್ಲಿದ್ದಾಗಲೂ ಮಧ್ಯರಾತ್ರಿ ತಿನ್ನುತ್ತಾರೆ. ಟಿವಿ ವೀಕ್ಷಿಸುವುದು, ಮೊಬೈಲ್ ಫೋನ್ ಬಳಸುವುದು ಇಲ್ಲವೇ ಕುಟುಂಬ ಸದಸ್ಯರೊಂದಿಗೆ ಚಾಟ್ ಮಾಡುತ್ತಾ ಸಮಯ ಕಳೆಯುತ್ತಾರೆ. ತಡರಾತ್ರಿಯವರೆಗೆ ಸ್ನೇಹಿತರೊಂದಿಗೆ ಚಾಟ್ ಮಾಡುವವರು, ಮಧ್ಯೆ ಬಿಸ್ಕತ್ತುಗಳಂತಹ ವಸ್ತುಗಳನ್ನು ಸೇವಿಸುತ್ತಾರೆ. ತಡರಾತ್ರಿ ಆಹಾರ ಸೇವನೆ ಮಾಡುವುದು ಅಥವಾ ಸಮಯ ಕಳೆಯಲು ಯಾವುದಾದರು ತಿಂಡಿ ಸೇವನೆ ಮಾಡುವುದು ಸರಿಯಾದ ಜೀರ್ಣಕ್ರಿಯೆಗೆ ಅಡ್ಡಿಯಾಗುತ್ತದೆ ಎಂದು ಆರೋಗ್ಯ ತಜ್ಞರು ತಿಳಿಸುತ್ತಾರೆ. ಈ ಅಭ್ಯಾಸವು ಹೆಚ್ಚುವರಿ ಕೊಬ್ಬು ಮತ್ತು ಕ್ಯಾಲೊರಿಗಳ ಸಂಗ್ರಹಕ್ಕೆ ಕಾರಣವಾಗಬಹುದು, ಇದು ಕ್ರಮೇಣ ತೂಕ ಹೆಚ್ಚಾಗಲು ಹಾಗೂ ನಿದ್ರಾಹೀನತೆಯಂತಹ ವಿವಿಧ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು ಎಂದು ತಜ್ಞರು ಎಚ್ಚರಿಕೆ ನೀಡುತ್ತಾರೆ. ತಡರಾತ್ರಿಯಲ್ಲಿ ತಪ್ಪಿಸಬೇಕಾದ ಕೆಲವು ನಿರ್ದಿಷ್ಟ ಆಹಾರಗಳ ಕುರಿತು ಅರಿತುಕೊಳ್ಳೋಣ.ಸಿಹಿ ತಿಂಡಿಗಳನ್ನು ತಿನ್ನುವುದು ನಿದ್ರೆಯನ್ನು ಪ್ರೇರೇಪಿಸಲು ಸಹಾಯ ಮಾಡುತ್ತದೆ ಎಂದು ಹಲವು ಜನರು ನಂಬುತ್ತಾರೆ. ಇದರ ಪರಿಣಾಮವಾಗಿ ಅವರು ಹೆಚ್ಚಾಗಿ ಮಲಗುವ ಮುನ್ನ ಸಿಹಿತಿಂಡಿಗಳು, ಚಾಕೊಲೇಟ್‌ಗಳು ಇಲ್ಲವೇ ಐಸ್ ಕ್ರೀಮ್ ಸೇವಿಸುತ್ತಾರೆ. ಹೆಚ್ಚಿನ ಸಕ್ಕರೆ ಅಂಶವಿರುವ ಆಹಾರಗಳು ನಿದ್ರೆಗೆ ಅಡ್ಡಿಪಡಿಸಬಹುದು ಎಂದು ಆರೋಗ್ಯ ತಜ್ಞರು ಎಚ್ಚರಿಕೆ ನೀಡುತ್ತಾರೆ. ರಾತ್ರಿಯಲ್ಲಿ ಇವುಗಳನ್ನು ಸೇವಿಸದಂತೆ ತಜ್ಞರು ಸಲಹೆ ನೀಡುತ್ತಾರೆ. ಸೈನ್ಸ್‌ಡೈರೆಕ್ಟ್ ತಿಳಿಸುವ ಪ್ರಕಾರ, ಎನರ್ಜಿ ಡ್ರಿಂಕ್ಸ್ ಮತ್ತು ಸಕ್ಕರೆ ಪಾನೀಯಗಳನ್ನು ಸೇವಿಸುವುದರಿಂದ ನಿದ್ರೆಯ ಗುಣಮಟ್ಟ ಕಡಿಮೆಯಾಗುತ್ತದೆ. ಕೇಕ್, ಐಸ್ ಕ್ರೀಮ್, ಬರ್ಗರ್ ಹಾಗೂ ಪಿಜ್ಜಾದಂತಹ ಹೆಚ್ಚಿನ ಕೊಬ್ಬಿನ ಆಹಾರಗಳನ್ನು ಸೇವಿಸುವುದರಿಂದ ಹೊಟ್ಟೆ ತುಂಬಿದ ಅನುಭವವಾಗುತ್ತದೆ. ಇದು ಕೆಲವೊಮ್ಮೆ ಜೀರ್ಣಾಂಗ ವ್ಯವಸ್ಥೆಯನ್ನು ನಿಧಾನಗೊಳಿಸುತ್ತದೆ. ಆಹಾರ ಸರಿಯಾಗಿ ಜೀರ್ಣವಾಗುವುದನ್ನು ತಡೆಯುತ್ತದೆ. ಇದು ಮರುದಿನ ಬೆಳಿಗ್ಗೆ ಆಲಸ್ಯಕ್ಕೆ ಕಾರಣವಾಗಬಹುದು. ರಾತ್ರಿಯಲ್ಲಿ ಅಂತಹ ಆಹಾರಗಳನ್ನು ತಪ್ಪಿಸಬೇಕಾಗುತ್ತದೆ ಎಂದು ತಜ್ಞರು ಸೂಚಿಸುತ್ತಾರೆ. ತಂಪು ಪಾನೀಯಗಳು ಹಾಗೂ ಸಿಟ್ರಸ್ ಹಣ್ಣಿನ ರಸಗಳಂತಹ ಹೆಚ್ಚು ಆಮ್ಲೀಯ ವಸ್ತುಗಳನ್ನು ರಾತ್ರಿಯಲ್ಲಿ ತಪ್ಪಿಸಬೇಕಾಗುತ್ತದೆ. ಈ ವಸ್ತುಗಳಲ್ಲಿನ ಆಮ್ಲೀಯ ಗುಣಲಕ್ಷಣಗಳು ವಿವಿಧ ಜೀರ್ಣಕಾರಿ ಸಮಸ್ಯೆಗಳಿಗೆ ಕಾರಣವಾಗಬಹುದು. ಇದರ ಪರಿಣಾಮವಾಗಿ ರಾತ್ರಿಯ ಸಮಯದಲ್ಲಿ ಅವುಗಳನ್ನು ಸೇವಿಸುವುದನ್ನು ತಡೆಯುವುದು ಉತ್ತಮ. ಹೆಚ್ಚುವರಿಯಾಗಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಅನೇಕ ಜನರು ಕೆಲಸದ ಒತ್ತಡ ಅಥವಾ ತಲೆನೋವನ್ನು ನಿವಾರಿಸಲು ಹೆಚ್ಚಿನ ಪ್ರಮಾಣದಲ್ಲಿ ಕಾಫಿ, ಚಹಾ ಸೇವಿಸುತ್ತಾರೆ. ಈ ಅಭ್ಯಾಸವನ್ನು ಆರೋಗ್ಯಕ್ಕೆ ಹಾನಿಕಾರಕವಾಗಿದೆ. ಜಾಗರೂಕರಾಗಿರುವುದು ಸೇವಿಸುವುದನ್ನು ತಪ್ಪಿಸುವುದು ಸೂಕ್ತವಾಗಿದೆ. ಕೆಫೀನ್ ನಿದ್ರೆಗೆ ಅಡ್ಡಿಪಡಿಸುವುದಲ್ಲದೆ ತೂಕ ಹೆಚ್ಚಾಗುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಕ್ಲೀವ್‌ಲ್ಯಾಂಡ್ ಕ್ಲಿನಿಕ್ ವಿವರಿಸುತ್ತದೆ. ಕೆಲವು ಜನರು ಮಲಗುವ ಮೊದಲು ಕೋಳಿ ಅಥವಾ ಕುರಿಮರಿ ಇಲ್ಲವೇ ಹೆಚ್ಚಿನ ಪ್ರಮಾಣದ ಆಹಾರವನ್ನು ಸೇವಿಸುತ್ತಾರೆ. ಮಲಗುವ ಮೊದಲು ಅಂತಹ ಹೆಚ್ಚಿನ ಪ್ರೋಟೀನ್ ಆಹಾರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸೇವಿಸುವುದರಿಂದ ಹೊಟ್ಟೆ ತುಂಬಿದ ಅನುಭವವಾಗುತ್ತದೆ. ಇದು ಸುಗಮ ಜೀರ್ಣಕ್ರಿಯೆಗೆ ಅಡ್ಡಿಯಾಗುತ್ತದೆ, ಅಜೀರ್ಣಕ್ಕೆ ಕಾರಣವಾಗಬಹುದು. ರಾತ್ರಿಯಲ್ಲಿ ಅಂತಹ ಆಹಾರಗಳ ಸೇವನೆಯನ್ನು ಕಡಿಮೆ ಮಾಡಬೇಕಾಗುತ್ತದೆ ಎಂದು ತಜ್ಞರು ವಿವರಿಸುತ್ತಾರೆ.ಅಧಿಕ ಮಸಾಲೆಯುಕ್ತ ಆಹಾರಗಳನ್ನು ತಪ್ಪಿಸುವುದು ಉತ್ತಮವೆಂದು ಪರಿಗಣಿಸಲಾಗಿದೆ. ರೋಚೆಸ್ಟರ್ ಮೆಡಿಸಿನ್ ವಿಶ್ವವಿದ್ಯಾಲಯವು ಮಾಂಸ, ಚೀಸ್, ಡೈರಿ ಉತ್ಪನ್ನಗಳು ಹಾಗೂ ಮೊಟ್ಟೆಗಳಿಂದ ದೂರವಿರಲು ಶಿಫಾರಸು ಮಾಡುತ್ತದೆ.

# ಮಳೆಗಾಲದಲ್ಲಿ ಮಾತ್ರ ಅರಳುತ್ತೆ ಈ ಅಪರೂಪದ ಹೂವುಗಳು!

ದೇಶದ ಹಲವೆಡೆ ವಿಪರೀತ ಮಳೆಯಾಗುತ್ತಿದೆ. ಈ ಮಾನ್ಸೂನ್ ಸೀಸನ್ ಬಂತೆಂದರೆ ಸಾಕು ವಿಶೇಷವಾದ ಮರಗಳು, ಗಿಡಗಳು ಮತ್ತು ಹೂಗಳನ್ನು ನಾವು ಕಾಣುತ್ತೇವೆ. ಸಾಮಾನ್ಯವಾಗಿ ಮಳೆಗಾಲ ಹೂಗಳು ಮತ್ತು ಗಿಡಗಳು ಬೆಳೆಯಲು ಉತ್ತಮವಾದ ಸಮಯ ಎಂದು ಪರಿಗಣಿಸಲಾಗುತ್ತದೆ. ಈ ಸಮಯದಲ್ಲಿ ಯಾವುದೇ ಕಾಡು, ಅರಣ್ಯ, ಬೆಟ್ಟ ಮತ್ತು ತೋಟವಾಗಿರಲಿ ಹಚ್ಚ ಹಸಿರಿನಿಂದ ಕೂಡಿರುತ್ತದೆ. ಕೆಲವು ಸಸ್ಯಗಳು ಮಳೆಯಿಂದ ಹಾನಿಗೊಳಗಾದರೆ, ಇನ್ನೂ ಅನೇಕ ಸಸ್ಯಗಳು ಮಳೆಗಾಲದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಸದ್ಯ ನಾವಿಂದು ಬೆಟ್ಟಗಳು, ಕಾಡುಗಳಲ್ಲಿ ಅರಳುವ ಮಳೆಗಾಲದ ಅಪರೂಪದ ಹೂವುಗಳ ಬಗ್ಗೆ ತಿಳಿಯೋಣ ಬನ್ನಿ.

ಭಾರತದಲ್ಲಿ ಸಿಗುವ ಅದ್ಭುತವಾದ ಹೂವುಗಳಲ್ಲಿ ಇದು ಸಹ ಒಂದಾಗಿದೆ, ಇದು ಕೇರಳದ ಮುನ್ನಾರ್ ಮತ್ತು ಎರವಿಕುಲಂ ರಾಷ್ಟ್ರೀಯ ಉದ್ಯಾನವನದ ಶೋಲಾ ಹುಲ್ಲುಗಾವಲುಗಳಲ್ಲಿ ಹಾಗೂ ತಮಿಳುನಾಡಿನ ಕೆಲವು ಭಾಗಗಳಲ್ಲಿ ಕಾಣಸಿಗುತ್ತದೆ. ಈ ನೇರಳೆ-ನೀಲಿ ಹೂವು ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಅರಳುತ್ತದೆ. ಈ ಹಿಂದೆ 2018 ರಲ್ಲಿ ಕಾಣಿಸಿಕೊಂಡಿದ್ದ ಹೂವು ಮತ್ತೆ 2030ರಲ್ಲಿ ಅರಳುವ ಸಾಧ್ಯತೆ ಇದೆ. ಈ ಹೂವಿಗೂ ಮಳೆಗಾಲಕ್ಕೂ ನಿಕಟ ಸಂಬಂಧವಿದ್ದು, ಇವು ಮಳೆಯ ನಂತರದ ತೇವಾಂಶದಲ್ಲಿ ಅರಳುತ್ತದೆ.

ಫ್ಲೇಮ್ ಲಿಲಿ: ಫ್ಲೇಮ್ ಲಿಲಿ ಎಂದು ಕರೆಯಲಾಗುವ ಗ್ಲೋರಿಯೋಸಾ ಸುಪರ್ಬಾ ಒಂದು ಅದ್ಭುತವಾದ ಹೂವಾಗಿದೆ. ಸಸ್ಯ ಇದನ್ನು ಫೈರ್ ಲಿಲಿ, ಗ್ಲೋರಿ ಲಿಲಿ, ಟೈಗರ್ ಕ್ಲಾ ಅಥವಾ ಅಗ್ನಿಶಿಖೆ ಎಂದೂ ಕರೆಯುತ್ತಾರೆ. ನೀವು ಈ ಹೂವುಗಳನ್ನು ಪಶ್ಚಿಮ ಘಟ್ಟಗಳಲ್ಲಿ ಅದರಲ್ಲೂ ವಿಶೇಷವಾಗಿ ಕೇರಳ, ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಕಾಣಬಹುದಾಗಿದೆ. ಜೂನ್‌ನಿಂದ ಆಗಸ್ಟ್ ವರೆಗೆ ಅರಳುವ ಈ ಹೂವುಗಳು ಕೆಂಪು-ಕಿತ್ತಳೆ ಬಣ್ಣದ್ದಲ್ಲಿರುತ್ತದೆ. ಇದನ್ನು ದೀರ್ಘಕಾಲದ ಕೆಲ ರೋಗಗಳಿಗೆ ಔಷಧಿಯಾಗಿ ಉಪಯೋಗಿಸಲಾಗುತ್ತದೆ. ಆದರೆ ಇದನ್ನು ಅತಿಯಾಗಿ ಸೇವಿಸುವುದರಿಂದ ಆರೋಗ್ಯಕ್ಕೆ ಹಾನಿಯುಂಟಾಗಬಹುದು ಎಚ್ಚರ.

ಸ್ಮಿಥಿಯಾ ಹಿರ್ಸುಟಾ ಎಂಬುದು ಫ್ಯಾಬೇಸಿ ಕುಟುಂಬಕ್ಕೆ ಸೇರಿದ ಸಣ್ಣ, ಜಾತಿಯ ಹೂವು. ಭಾರತದ ಎತ್ತರ ಪ್ರದೇಶಗಳಲ್ಲಿ ಕಂಡುಬರುವ ಈ ಹಳದಿ ಬಣ್ಣದ ಹೂವು ನೋಡಲು ಜುಲೈನಿಂದ ಅಕ್ಟೋಬರ್ ಆರಂಭದವರೆಗೆ ಅರಳುತ್ತದೆ. 2021ರಲ್ಲಿ ಪ್ರಕಟವಾದ ವರದಿಗಳ ಪ್ರಕಾರ, ಈ ಹೂವುಗಳು ಮಹಾರಾಷ್ಟ್ರದ ಪ್ರಸಿದ್ಧ ಕಾಸ್ ಪಠಾಣ್ ಕಣಿವೆ ಹಾಗೂ ಇತರ ಪಶ್ಚಿಮ ಘಟ್ಟದ ತಪ್ಪಲು ಪ್ರದೇಶಗಳಲ್ಲಿ ಮಳೆಗಾಲದ ನಂತರ ವ್ಯಾಪಕವಾಗಿ ಅರಳುತ್ತವೆ.

**ಪಿಂಕ್ ಬಾಲ್ಸಾಮ್:** ಪಿಂಕ್ ಬಾಲ್ಸಾಮ್ ಹೂವನ್ನು ಗಾರ್ಡನ್ ಬಾಲ್ಸಾಮ್, ರೋಸ್ ಬಾಲ್ಸಾಮ್ ಅಥವಾ ಟಚ್-ಮಿ-ನಾಟ್ ಎಂದೂ ಕರೆಯುತ್ತಾರೆ. ಕೇರಳ, ಕರ್ನಾಟಕ



ಮತ್ತು ತಮಿಳುನಾಡಿನ ನಿತ್ಯಹರಿದ್ವರ್ಣ ಕಾಡುಗಳ ತೇವಾಂಶವುಳ್ಳ ಸ್ಥಳಗಳಲ್ಲಿ ಈ ಹೂವುಗಳನ್ನು ಬೆಳೆಯಲಾಗುತ್ತದೆ. ಜೂನ್‌ನಿಂದ ಸೆಪ್ಟೆಂಬರ್ ವರೆಗೆ ನೆರಳಿನಲ್ಲಿ ಮತ್ತು ಜಲಪಾತಗಳ ಬಳಿ ಅರಳುತ್ತವೆ. ನೋಡಲು ಗುಲಾಬಿ (ಪಿಂಕ್) ಬಣ್ಣದಲ್ಲಿರುವ ಈ ಹೂವುಗಳ ಗಾತ್ರ ಸುಮಾರು 2-5 ಸೆಂ.ಮೀ. ಇರುತ್ತದೆ.

ಬ್ರಹ್ಮ ಕಮಲ ಹೂವು ಭಾರತದ ಹಿಮಾಲಯ ಪ್ರದೇಶದ ಅಪರೂಪದ ಮತ್ತು ದೈವಿಕ ಹೂವು. ಇದರ ವೈಜ್ಞಾನಿಕ ಹೆಸರು ಉತ್ತರಾಖಂಡದ ಹೂವಾಗಿರುವ ಇದು ಜುಲೈ ಮತ್ತು ಸೆಪ್ಟೆಂಬರ್ ನಡುವೆ ರಾತ್ರಿ ಹೊತ್ತು ಮಾತ್ರ ಅರಳುತ್ತದೆ. ಆದರೆ ಮುಂಜಾನೆ ಹೊತ್ತಿಗೆ ಒಣಗಿ ಹೋಗಿರುತ್ತದೆ. ಹಿಂದೂ ಪುರಾಣಗಳಲ್ಲಿ ಪೂಜಿಸಲ್ಪಡುವ ಮತ್ತು ದೇವಾಲಯದ ಆಚರಣೆಗಳಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಸುಮಾರು 3,7004,600 ಮೀಟರ್ ಎತ್ತರದ ಆಲ್ಪೈನ್ ಹುಲ್ಲುಗಾವಲುಗಳಲ್ಲಿ ಬೆಳೆಯುವ ಈ ಹೂವು ಒಳಗೆ ಪರ್ಪಲ್/ನೀಲಿ-ಬಣ್ಣದ್ದಲ್ಲಿರುತ್ತದೆ. ಮಧುಮಾಲತಿ ಬಳ್ಳಿ ವರ್ಣರಂಜಿತ ಹೂಬಿಡುವ ಗಿಡದಲ್ಲಿ ಇದು ಸಹ ಒಂದಾಗಿದ್ದು, ಮಳೆಗಾಲದಲ್ಲಿ ಮನೆ ಅಥವಾ ತೋಟದಲ್ಲಿ ನೆಡಲು ಇದು ಉತ್ತಮವಾಗಿದೆ. ಏಕೆಂದರೆ ಇದು ಕ್ರಮೇಣ ದೊಡ್ಡ ಗಾತ್ರಕ್ಕೆ ಬೆಳೆಯುತ್ತದೆ.

ಇದು ಒಂದೇ ಮರ. ಆದರೆ ಇದು ಕೆಂಪು, ಬಿಳಿ ಮತ್ತು ಗುಲಾಬಿ ಹೂವುಗಳನ್ನು ಬಿಡುತ್ತದೆ. ಅಲ್ಲದೇ ಇವುಗಳ ಸುವಾಸನೆಯು ಆಹ್ಲಾದಕರವಾಗಿರುತ್ತದೆ. ನೀವಿದನ್ನು ನಿಮ್ಮ ತೋಟದಲ್ಲಿ ಅಥವಾ ಅಂಗಳದಲ್ಲಿ ನೆಡಬಹುದು. ಇದು ನಿಮ್ಮ ಮನೆಯ ಸೌಂದರ್ಯ ಮತ್ತು ಸುವಾಸನೆಯನ್ನು ಹೆಚ್ಚಿಸುತ್ತದೆ. ಈ ಗಿಡಗಳಿಗೆ ಹೆಚ್ಚು ಆರೈಕೆ ಮಾಡುವ ಅಗತ್ಯವಿಲ್ಲ. ಒಮ್ಮೆ ನಿಮ್ಮ ತೋಟದಲ್ಲಿ ನೆಟ್ಟರೆ, ಅವು ವರ್ಷಪೂರ್ತಿ ನಿಮ್ಮ ತೋಟವನ್ನು ಹಚ್ಚ ಹಸಿರಾಗಿರಿಸುತ್ತವೆ. ಮಧುಕಾಮಿನಿ ಈ ಹೂವು ಮಲ್ಲಿಗೆಯನ್ನು ಹೋಲುತ್ತದೆ, ಆದರೆ ಪರಿಮಳ ಮಾತ್ರ ಡಿಫರೆಂಟ್ ಆಗಿರುತ್ತದೆ. ಇದರ ಎಲೆಗಳು ಸ್ವಲ್ಪ ದಪ್ಪವಾಗಿರುತ್ತವೆ ಮತ್ತು ಹೂವುಗಳು ನೋಡಲು ಸ್ವಲ್ಪ ದೊಡ್ಡದಾಗಿರುತ್ತವೆ. ಆದರೆ, ಇದನ್ನು ಮಳೆಗಾಲದಲ್ಲಿ ನೆಡುವುದು ಉತ್ತಮ. ಇದು ವರ್ಷಪೂರ್ತಿ ಚೆನ್ನಾಗಿ ಬೆಳೆಯುವ ನಿತ್ಯಹರಿದ್ವರ್ಣ ಸಸ್ಯವಾಗಿದೆ.

# ಮಖಾನಾ ತಿನ್ನೋ ಮುನ್ನ ಎಚ್ಚರ, ಇವರಿಗಿದೆ ಅಪಾಯ, ಆಸ್ಪತ್ರೆಗೆ ಸೇರಬೇಕಾಗಬಹುದು!

ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಮಂದಿ ಮಖಾನಾ ಸೇವಿಸುತ್ತಿದ್ದಾರೆ. ಇದು ಕಡಿಮೆ ಕ್ಯಾಲೋರಿಗಳು, ಗ್ಲುಟನ್-ಮುಕ್ತ ಮತ್ತು ಹಲವಾರು ಪೋಷಕಾಂಶಗಳಿಂದ ಸಮೃದ್ಧವಾಗಿದೆ. ಆದ್ದರಿಂದ ಇದನ್ನು ಆರೋಗ್ಯಕರ ತಿಂಡಿಯಾಗಿ ಹೆಚ್ಚಾಗಿ ಸೇವಿಸಲಾಗುತ್ತದೆ. ಆದರೆ, ಕೆಲ ಮಂದಿ ಇದನ್ನು ಅತಿಯಾಗಿ ಅಥವಾ ನಿಯಮಿತವಾಗಿ ಸೇವಿಸುವುದರಿಂದ ಜೀರ್ಣಕ್ರಿಯೆ ಸಮಸ್ಯೆಗಳು, ಅಲರ್ಜಿಗಳು ಅಥವಾ ಇತರ ಆರೋಗ್ಯ ಸಮಸ್ಯೆಗಳು ಉಂಟಾಗಬಹುದು. ಆದ್ದರಿಂದ, ಇದನ್ನು ನಿಮ್ಮ ಆಹಾರದ ನಿಯಮಿತ ಭಾಗವನ್ನಾಗಿ ಮಾಡಿಕೊಳ್ಳುವ ಮುನ್ನ ನಿಮ್ಮ ಆರೋಗ್ಯ ಸ್ಥಿತಿಯನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಬಹಳ ಮುಖ್ಯ. ಹಾಗಾದ್ರೆ ಎಂಥಹವರು ಮಖಾನಾ ತಿನ್ನಬಾರದು ಎಂದು ತಿಳಿಯೋಣ ಬನ್ನಿ.

**ಜೀರ್ಣಕ್ರಿಯೆ ಸಮಸ್ಯೆ ಇರುವವರು:** ಮಖಾನವು ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳು ಮತ್ತು ಫೈಬರ್ ಅನ್ನು ಹೊಂದಿರುತ್ತದೆ. ಈಗಾಗಲೇ ಗ್ಯಾಸ್ಟ್ರಿಕ್, ಹೊಟ್ಟೆ ಉಬ್ಬರ, ಮಲಬದ್ಧತೆ ಅಥವಾ ಕಳಪೆ ಜೀರ್ಣಕ್ರಿಯೆ ಸಮಸ್ಯೆ ಹೊಂದಿರುವವರು ಇದನ್ನು ಅತಿಯಾಗಿ ಸೇವಿಸಿದರೆ ಅನಾನುಕೂಲತೆಯನ್ನು ಅನುಭವಿಸಬಹುದು.

ವಿಶೇಷವಾಗಿ ಮಸಾಲೆಯುಕ್ತ ಅಥವಾ ಹೆಚ್ಚು ಹುರಿದ ಮಖಾನವನ್ನು ತಿನ್ನುವುದರಿಂದ ಜೀರ್ಣಕ್ರಿಯೆ ನಿಧಾನವಾಗಬಹುದು. ಇಂತಹವರು ಸೀಮಿತ ಪ್ರಮಾಣದಲ್ಲಿ ಮಖಾನ ಸೇವಿಸಬೇಕು. ಕೆಲ ಸಂಶೋಧನೆ ಮತ್ತು ಸಾಂಪ್ರದಾಯಿಕ ನಂಬಿಕೆಗಳ ಪ್ರಕಾರ, ಮಖಾನಾ ರಕ್ತದೊತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ವಿಶೇಷವಾಗಿ ಮಸಾಲೆಯುಕ್ತ ಅಥವಾ ಹೆಚ್ಚು ಹುರಿದ ಮಖಾನವನ್ನು ತಿನ್ನುವುದರಿಂದ ಜೀರ್ಣಕ್ರಿಯೆ ನಿಧಾನವಾಗಬಹುದು.

ಆದರೆ, ಈಗಾಗಲೇ ಕಡಿಮೆ ರಕ್ತದೊತ್ತಡ ಹೊಂದಿರುವವರು ಜಾಗರೂಕರಾಗಿರಬೇಕು. ಹೆಚ್ಚು ಪ್ರಮಾಣದಲ್ಲಿ ಮಖಾನಾ ಸೇವಿಸುವುದರಿಂದ ಕೆಲ ಮಂದಿಯಲ್ಲಿ ದೌರ್ಬಲ್ಯ, ತಲೆತಿರುಗುವಿಕೆ ಅಥವಾ ಆಯಾಸದಂತಹ ಸಮಸ್ಯೆಗಳು ಹೆಚ್ಚಾಗಬಹುದು. ನಿಮಗೆ ಕಡಿಮೆ ರಕ್ತದೊತ್ತಡ ಇದ್ದರೆ, ನಿಯಮಿತವಾಗಿ ಮಖಾನಾ ತಿನ್ನುವುದಕ್ಕೂ ಮುನ್ನ ವೈದ್ಯರನ್ನು ಸಂಪರ್ಕಿಸುವುದು ಉತ್ತಮ.

# ಕೊರೋನಾ ನಂತರ ಆಸ್ಪತ್ರೇಯ ಬಿಲ್ಲುಗಳು ಹೆಚ್ಚಳದಿಂದ ಜನಸಾಮಾನ್ಯರಲ್ಲಿ ಅಂತಕ: ಕೆಪಿಸಿಸಿ ಉಪಾಧ್ಯಕ್ಷ ರಾಠೋಡ್ ಕಳವಳ

• **ಉದಯವಾಹಿನಿ,ಚಿಂಚೋಳಿ:**

ಕೊರೋನಾ ನಂತರ ಖಾಸಗಿ ಆಸ್ಪತ್ರೇಗಳಲ್ಲಿ ರೋಗಿಗಳಿಗೆ ನೀಡುವ ಚಿಕಿತ್ಸೆಯ ಬಿಲ್ಲುಗಳಲ್ಲಿ ಶೇಕಡಾ 04ಪಟ್ಟು ಹೆಚ್ಚಳಯಾಗಿದ್ದು ಇದರಿಂದ ಜನಸಾಮಾನ್ಯರಲ್ಲಿ ಅತಂಕವುಂಟಾಗಿದೆ ಇದರಿಂದ ಬಡವರು ಮದ್ಯಮ ವರ್ಗದವರು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಕೆಪಿಸಿಸಿ ಉಪಾದ್ಯಕ್ಷ ಸುಭಾಸ ರಾಠೋಡ್ ಕಳವಳ ವ್ಯಕ್ತಪಡಿಸಿದರು.

ಪಟ್ಟಣದ ಚಂದಾಪೂರದ ಟಿಎಪಿಸಿಎಂಎಸ್ ಆವರಣದ ಕಟ್ಟಡದಲ್ಲಿ ನೂತನವಾಗಿ ಅಫೇಕ್ಸ್ ಆಸ್ಪತ್ರೇಯ ಉಧ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೋಂಡು ಮಾತನಾಡಿದ ಅವರು, ಡಾ.ಶೇಕ್ ಅಬ್ದುಲ್ ಅಜೀಜ್ ವೈದ್ಯರು ಎಂಬಿಬಿಎಸ್,ಎಂಎಸ್ ಪದವಿ ಪಡೆದು ಜಿಲ್ಲಾ,ರಾಜ್ಯ ಮಟ್ಟದಲ್ಲಿ ಆಸ್ಪತ್ರೇ ಪ್ರಾರಂಭ


ಉದಯವಾಹಿನಿ ಚಿತ್ರ

ಮಾಡಬಹುದಿತ್ತು ಆದರೆ ಚಿಂಚೋಳಿ ಸ್ವತಃ ಗ್ರಾಮದಲ್ಲಿ ಜನರ ಆರೋಗ್ಯ ಸೇವೆ ಮಾಡಲು ಆಸ್ಪತ್ರೇ ಪ್ರಾರಂಭ ಮಾಡಿದ್ದಾರೆ.

ಸಾರ್ವಜನಿಕರು ಅಫೇಕ್ಸ್ ಆಸ್ಪತ್ರೆಯ ಸದುಪಯೋಗ ಪಡೆದುಕೊಳ್ಳಬೇಕು, ಬೀದರ 60ಕಿಮೀ, ಕಲಬುರ್ಗಿ 85ಕಿಮೀ,ದೂರ ಹೋಗುವ ಪರಿಸ್ಥಿತಿಯಲ್ಲಿ ಕಡಿಮೆ ವೆಚ್ಚದಲ್ಲಿಯೇ ಚಿಕಿತ್ಸೆ ನೀಡುತ್ತಿದ್ದು ಸಾರ್ವಜನಿಕರು ಸದುಪಯೋಗ ಪಡೆದುಕೋಳ್ಳಬೇಕು ಎಂದರು.

ಶಾಸಕ ಡಾ.ಅವಿನಾಶ ಜಾಧವ ಜಾಧವ ಅವರು ಅಫೇಕ್ಸ್ ಆಸ್ಪತ್ರೇ ಉಧ್ಘಾಟನೆ ಮಾಡಿ ಮಾತನಾಡಿ ವೈದ್ಯ ವೃತ್ತಿ ಓದುವಾಗಲೇ ರೋಗಿಗಳಿಗೆ ಗುಣಮುಖ ಮಾಡಲು ಹೇಗೆ ಮಾಡಬೇಕೆಂದು ಕಷ್ಟಪಟ್ಟು ಓದಿ ವೈದ್ಯರು ಬರುತ್ತಾರೆ ಆದರೆ ವೈದ್ಯರಿಗೆ ಬೆಂಬಲ ನೀಡಿದಾಗ ಮಾತ್ರ ಉತ್ತಮ ವೈದ್ಯ ಸೇವೆ ನೀಡಲು ಸಾದ್ಯವೆಂದರು. ಡಾ.ಶೇಕ್ ಅಬ್ದುಲ್ ಅಜೀಜ್ ಆಸ್ಪತ್ರೆ ಪ್ರಾರಂಭಿಸುತ್ತಿರುವುದು ಸಂತೋಷದ ವಿಷಯ ತಮಗೆ ಶುಭಾವಾಗಲಿ ಆದರೆ ಕಳೆದ 10-15ವರ್ಷಗಳ ಹಿಂದೆ ಆಸ್ಪತ್ರೆಗಳು ಕಡಿಮೆ ಆರೋಗ್ಯ ಸೇವೆ ಕೂಡ ಬಹಳಷ್ಟು ಕಡಿಮೆ ಸಿಗುತ್ತಿದವು ಆದರೆ ಈಗ ಸರ್ಕಾರಿ ಆಸ್ಪತ್ರೆಗಳು ಸ್ಥಾಪಿಸಿದೇವೆ ಖಾಸಗಿ ಆಸ್ಪತ್ರೆಗಳು ಕೂಡ ಪ್ರಾರಂಭವಾಗಿವೆ ನಾನು ಶಾಸಕನಾದ ಮೇಲೆ ಆಸ್ಪತ್ರೆಗಳಿಗೆ ಒತ್ತು ನೀಡಿ ಆಸ್ಪತ್ರೆಗಳಲ್ಲಿ ಜನರಿಗೆ ಉತ್ತಮ ಚಿಕಿತ್ಸೆ ದೊರಕುವಂತೆ ನೋಡಿಕೋಳ್ಳುತ್ತಿದ್ದೇನೆ,ಸದಾ ನಿಮ್ಮ ಬೇಂಬಲಕ್ಕೆ ನಾನಿದ್ದೇನೆ ಎಂದರು.

ಅಫೇಕ್ಸ್ ಆಸ್ಪತ್ರೆ ಸಂಸ್ಥಾಪಕ ಅಧ್ಯಕ್ಷರು ಡಾ.ಶೇಕ್ ಅಬ್ದುಲ್ ಅಜೀಜ್ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು,ಕೆಎಂ.ಬಾರಿ,ರಾಹುಲ್ ಯಾಕಾಪೂರ,ಮುಕುಂದ ದೇಶಪಾಂಡೆ,ಮಾತನಾಡಿದರು. ಈ ಸಂದರ್ಭದಲ್ಲಿ: ಎಸಿಎಫ್ ಮುನೀರ್ ಅಹೇಮದ್,ಅಬ್ದುಲ್ ಬಾಷೀದ್,ವೀರಶೆಟ್ಟಿ ಪಾಟೀಲ್,ಶರಣು ಪಾಟೀಲ್,ಶೈಲೇಶ ಹುಲಿ,ಜಗದೀಶಸಿಂಗ್ ಠಾಕೂರ್,ರಾಜು ಪವ್ವಾರ್,ಉಮಾ ಪಾಟೀಲ್ ,ಅಶೋಕ ಮೋಗದಂಪೂರ್, ಶ್ರೀಮಂತ ಕಟ್ಟಿಮನಿ,ಶಶಿಕಾಂತ ಅಡಕಿ,ಶೇಕ್ ಫರೀದ್,ಮತೀನ್ ಸೌದಾಗಾರ,ಹಾಫೀಜ್ ಅಬ್ದುಲ್ ಹಮೀದ್,ಎಸ್ಕೆ ಮೋಖ್ತಾರ್,ಎಂಕೆ ಮಖ್ದುಮ್,ಶೇಖ್ ಅಬ್ದುಲ್ ನಜೀರ್,ತೌಫೀಕ್ ಖುರೇಷಿ,ಶಬ್ಬೀರ್ ಅಹೇಮದ್,ಸತೀಶರೆಡ್ಡಿ,ಅತೀಕ್ ಪಾಷ,ಸೇರಿದಂತೆ ಅನೇಕರಿದ್ದರು.

# 15 ದಿನಗಳ ಧಾರಾಕಾರ ಮಳೆಗೆ ಬಿಡುವು: ಕೊಪ್ಪ ರೈತರಿಂದ ಅಡಕೆಗೆ ಔಷಧ ಸಿಂಪರಣೆ ಬಿರುಸು

**ಮಲೆನಾಡು ಹಾಗೂ ಕರಾವಳಿ, ಪಶ್ಚಿಮ ಘಟ್ಟದ ಜಿಲ್ಲೆಗಳಲ್ಲಿ 15 ದಿನಗಳ ಕಾಲ ಸುರಿದ ಭಾರೀ ಮಳೆಗೆ ಈಗ ಬ್ರೇಕ್ ಬಿದ್ದಿದೆ.**

• **ಉದಯವಾಹಿನಿ, ಕೊಪ್ಪ:**

ತಾಲ್ಲೂಕಿನ ಪ್ರಮುಖ ವಾಣಿಜ್ಯ ಬೆಳೆಯಾದ ಅಡಕೆಯ ಮರಗಳಿಗೆ ಕೊಳೆರೋಗ ಬಾರದಂತೆ ತಡೆಯಲು ಔಷಧ ಸಿಂಪರಣೆ ಕಾರ್ಯ ಭರದಿಂದ ಸಾಗಿದೆ. 15 ದಿನಗಳ ಕಾಲ ಧಾರಾಕಾರ ಹಾಗೂ ಜಿಟಿಜಿಟಿ ಸುರಿಯುತ್ತಿದ್ದ ಮಳೆ ಕೊಂಚ ಬಿಡುವು ನೀಡಿರುವುದು ಕೃಷಿ ಕೆಲಸಗಳಿಗೆ ಅನುಕೂಲವಾಗಿದೆ.

1. 1 ಸಾವಿರ ಹೆಕ್ಟೇರ್
2. ಬೆಳೆ ಕೊಳೆರೋಗಕ್ಕೆ ಬಲಿಯಾಗುತ್ತದೆ.
3. ಚಿಕ್ಕ ಬೆಳೆಗಾರರಿಗೆ ತ್ರಿಶಂಕು ಸ್ಥಿತಿ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಮೂರು ಹೋಬಳಿಯಿಂದ ಸುಮಾರು 9,357 ಹೆಕ್ಟೇರ್ ವಿಸ್ತೀರ್ಣದಲ್ಲಿ ಅಡಕೆ ಬೆಳೆಯಲಾಗುತ್ತಿದೆ. ಪ್ರತಿವರ್ಷ ಮಳೆ ಹೆಚ್ಚಾಗಿ ಸುಮಾರು 1 ಸಾವಿರ ಹೆಕ್ಟೇರ್ ನಷ್ಟು ಬೆಳೆ ಕೊಳೆರೋಗಕ್ಕೆ ಬಲಿಯಾಗುತ್ತದೆ. ಉಳಿದಂತೆ ಹಳದಿ ಎಲೆರೋಗ, ಎಲೆ ಚುಕ್ಕಿ ರೋಗಗಳಿಂದ ಬಹುಪಾಲು ಫಸಲು ನಾಶವಾಗುತ್ತಿದೆ. ಚಿಕ್ಕ ಬೆಳೆಗಾರರಿಗೆ ತ್ರಿಶಂಕು ಸ್ಥಿತಿ ಏರ್ಪಟ್ಟಿದ್ದು ಇಂದಿನ ನಿರ್ವಹಣಾ ವೆಚ್ಚ, ಅನಿಶ್ಚಿತ ಮಳೆಯಿಂದಾಗಿ ಹೈರಾಣಾಗಿದ್ದಾರೆ.ಅಡಕೆ ಎಲೆಚುಕ್ಕಿ ರೋಗ ನಿಯಂತ್ರಣ ಕಾರ್ಯಕ್ರಮದಡಿ 89.98 ಲಕ್ಷ ರೂ. ಸಹಾಯಧನ ಮೀಸಲಿಡಲಾಗಿದೆ

ಮಳೆ ಆರಂಭವಾಗುವ ಸಮಯದಲ್ಲಿ ಸಾಂಪ್ರದಾಯಿಕ ಬೋರ್ಡೋ ದ್ರಾವಣ ಸಿಂಪರಣೆ ಮಾಡುವುದು ರೂಢಿ. ಕೆಲವೊಮ್ಮೆ ಖಾಸಗಿ ಸಂಸ್ಥೆ ಮತ್ತು ಖಾಸಗಿ ವ್ಯಕ್ತಿಗಳು ಬೇರೆ ಬೇರೆ ರೀತಿಯ ಔಷಧಗಳನ್ನು ಸಿಂಪಡಿಸುವಂತೆ ರೈತರಿಗೆ ನೀಡಿದ ತಪ್ಪು ತಿಳಿವಳಿಕೆಯಿಂದ ಅನಾಹುತಗಳಾದ ನಿದರ್ಶನಗಳಿವೆ. ಆದರೆ, ಬೋರ್ಡೋ ದ್ರಾವಣ ಸಿಂಪರಣೆಯನ್ನು ರೈತರ ಕೈಬಿಟ್ಟಿಲ್ಲ. ಒಮ್ಮೆ ಸಿಂಪಡಿಸಿದಲ್ಲಿ ಸಾಧಾರಣ ಮಳೆಯಾದರೆ ಸುಮಾರು 45 ದಿನಗಳವರೆಗೆ ಕೊಳೆ ಅಂಟುವುದಿಲ್ಲ. ಕೆಲವೊಮ್ಮೆ ರೈತರೆ ಸ್ವಯಂ ವಿಜ್ಞಾನಿಗಳಾಗಿ ಮೂರು, ನಾಲ್ಕು ಬಾರಿ ಔಷಧ ಸಿಂಪಡಿಸಿದ ಉದಾಹರಣೆಗಳೂ

> **ನಮ್ಮ ಭಾಗದಲ್ಲಿ ಅನಿಶ್ಚಿತ ಮಳೆ ಬೀಳುವುದರಿಂದ ವಾತಾವರಣ ಅಡಕೆ ಬೆಳೆಗೆ ಮಾರಕವಾಗಿದೆ. ಇನ್ನು ನಾಗಲಾಪುರದಂತಹ ನದಿ ದಂಡೆಯಲ್ಲಿರುವ ಅಡಕೆ ತೋಟಗಳಿಗೆ ನೆರೆ ಹಾವಳಿ ಸಮಸ್ಯೆಯೂ ಇದೆ. ಒಟ್ಟಾರೆಯಾಗಿ ನಮ್ಮ ಬದುಕು ವರ್ಷದಿಂದ ವರ್ಷಕ್ಕೆ ಕಠಿಣವಾಗುತ್ತಾ ಹೋಗುತ್ತಿದೆ ಎಂದಿದ್ದಾರೆ.**
> **ನರೇಂದ್ರ ಶೆಟ್ಟಿ, ನಾಗಲಾಪುರ, ಕೊಪ್ಪ ತಾಲ್ಲೂಕು.**

ಇವೆ. ಮಳೆ ಎರಡು ದಿನದಿಂದ ಬಿಡುವು ನೀಡಿರುವುದರಿಂದ ರೈತರು ನಿರಾಂತಕವಾಗಿ ಔಷಧ ಸಿಂಪಡಿಸುತ್ತಿದ್ದಾರೆ.

### ನುರಿತ ಕಾರ್ಮಿಕರ ಕೊರತೆ

**ಎತ್ತರದ ಮತ್ತು ಅತಿ ಹೆಚ್ಚು ವಯಸ್ಸಾದ ಅಡಕೆ ಮರಗಳನ್ನು ಹತ್ತಿ ಅಡಕೆ ಫಸಲಿಗೆ ಔಷಧ ಸಿಂಪಡಿಸಿ, ಇನ್ನೊಂದು ಮರಕ್ಕೆ ಕೊಕ್ಕೆ ಹಾಕಿ ಅಲ್ಲಿಂದ ಮರಕ್ಕೆ ಹೋಗುವ ನುರಿತ ಕಾರ್ಮಿಕರ ಕೊರತೆ ಹೆಚ್ಚಾಗಿದೆ. ಇದು ಬಹಳ ಅಪಾಯಕಾರಿ ಕೆಲಸವಾಗಿದ್ದು, ಯುವಜನತೆ ಸಿಂಪರಣೆ ಕಾರ್ಯಕ್ಕೆ ಮುಂದಾಗುತ್ತಿಲ್ಲ. ಲಭ್ಯವಿರುವ ಕಾರ್ಮಿಕರು ಔಷಧದ ಡ್ರಮ್ ಲೆಕ್ಕ ಹಾಕಿ ಕೂಲಿ ಪಡೆಯುತ್ತಾರೆ.**

> **ಅಡಕೆ ಎಲೆಚುಕ್ಕಿ ರೋಗ ನಿಯಂತ್ರಣ ಕಾರ್ಯಕ್ರಮದಡಿ 89.98 ಲಕ್ಷ ರೂ. ಸಹಾಯಧನ ಮೀಸಲಿಡಲಾಗಿದೆ. ಅಡಕೆ ಬೆಳೆಗಾರರು ತೋಟಗಾರಿಕಾ ಕಚೇರಿಗೆ ಭೇಟಿ ನೀಡಿ ಸೌಲಭ್ಯದ ಸದುಪಯೋಗ ಪಡೆದುಕೊಳ್ಳಬೇಕು ಎಂದಿದ್ದಾರೆ.**
> **ಅಶೋಕ್, ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕ, ಕೊಪ್ಪ.**

ಇದು ಮಾಲೀಕರಿಗೆ ಬಹಳ ದುಬಾರಿಯಾಗಿದೆ. ಬಹಳಷ್ಟು ಕಡೆ ನೆಲದಿಂದಲೆ ಪೈಪ್ ಮೂಲಕ ಔಷಧ ಸಿಂಪಡಿಸುವ ಕೆಲಸ ನಡೆಯುತ್ತಿದ್ದರೆ, ಡ್ರೋನ್ ಮೂಲಕ ಔಷಧ ಸಿಂಪರಣೆ ಮಾಡುವ ಪ್ರಯೋಗವೂ ನಡೆದಿದೆ.ಅಡಕೆಯನ್ನು ಅದೃಷ್ಟ ನಂಬಿ ಬೆಳೆಯಬೇಕಾದ ಸ್ಥಿತಿಯಿದೆ.

# ಬಿಡದಿ ಟೌನ್‌ಶಿಪ್‌ಗೆ ಒತ್ತಾಯಪೂರ್ವಕವಾಗಿ ಜಮೀನು ತೆಗೆದುಕೊಳ್ಳುತ್ತಿಲ್ಲ: ಸಚಿವ ಸತೀಶ್ ಜಾರಕಿಹೊಳಿ

• **ಉದಯವಾಹಿನಿ, ಹಾವೇರಿ :**

ಬಿಡದಿ ಟೌನ್‌ಶಿಪ್‌ಗೆ ಒತ್ತಾಯ ಪೂರ್ವಕವಾಗಿ ಜಮೀನು ತೆಗೆದುಕೊಳ್ಳುತ್ತಿಲ್ಲ, ಸ್ವಯಂ ಪ್ರೇರಿತವಾಗಿ ಯಾರು ಕೊಡುತ್ತಿದ್ದಾರೆಯೋ ಅವರ ಜಮೀನು ತೆಗೆದುಕೊಳ್ಳಲಾಗುತ್ತಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಹೇಳಿದ್ದಾರೆ.

ಬಿಡದಿ ರೈತರ ಮೇಲೆ ಎಫ್‌ಐಆರ್ ಹಾಕಿರುವ ವಿಚಾರ ಕುರಿತಂತೆ ಉಕ್ಕಡಗಾತ್ರಿ ಗ್ರಾಮದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಿನ್ನೆ ಕೂಡ ಜಮೀನು ಕೊಟ್ಟವರ ಸರ್ವೆ ಮಾಡೋಕೆ ಅಧಿಕಾರಿಗಳು ಹೋಗಿದ್ದರು. ಕೊಡಲ್ಲ ಅಂದರೆ ತೆಗೆದುಕೊಳ್ಳುವುದಿಲ್ಲ ಅಷ್ಟೇ' ಎಂದು ತಿಳಿಸಿದರು. ಯಾರು ಕೊಡುತ್ತಾರೆಯೋ ಅವರದ್ದು ಮಾತ್ರ ತೆಗೆದುಕೊಂಡಿದ್ದಾರೆ. ಜಬರ್ದಸ್ತಿ ಮೇಲೆ ತಗೊಳ್ಳುತ್ತಿಲ್ಲ. ಒತ್ತಾಯ ಪೂರ್ವಕವಾಗಿ


ಉದಯವಾಹಿನಿ ಚಿತ್ರ

ಪಡೆಯುತ್ತಿಲ್ಲ. ಸೋಮವಾರ ಅಧಿಕಾರಿಗಳ ಮೇಲೆ ಹಲ್ಲೆ ಮಾಡಿದವರ ಮೇಲೆ ಯಾವ ಸೆಕ್ಷನ್ ಹಾಕಿದ್ದಾರೆ ಅನ್ನೋದು ಗೊತ್ತಿಲ್ಲ. ನಾವು ಯಾವುದೇ ಒತ್ತಡ ಹಾಕಿಲ್ಲ. ಅಲ್ಲಿ ಏನಾಗಿದೆ ಎಂಬ ಇನ್ಸಿಡೆಂಟ್ ನನಗೆ ಗೊತ್ತಿಲ್ಲ ಎಂದು ಹೇಳಿದರು.

ಆರ್‌ಎಸ್‌ಎಸ್ ನೋಂದಣಿ ವಿಚಾರ ಗೃಹ ಸಚಿವರಿಗೆ ಸಂಬಂಧಿಸಿದ ವಿಚಾರ. ಅಹಿಂದ್‌ಸಂಘಟನೆ ನೋಂದಣಿ ಆಗಿದೆ. ಯಾವುದೋ ಹೆಸರಲ್ಲಿ ಈ ಹಿಂದೆ ನೋಂದಣಿ ಆಗಿದೆ. ಆರ್‌ಎಸ್‌ಎಸ್ ನೋಂದಣಿ ಬಗ್ಗೆ ಗೃಹ ಸಚಿವರು ಈಗಾಗಲೇ ಮಾತಾಡಿದ್ದಾರೆ. ಅದು ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ವಿಚಾರವಲ್ಲ ಎಂದು ಹೇಳಿದರು.

ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಸತೀಶ್ ಜಾರಕಿಹೊಳಿ ನಡುವೆ ಅಸಮಾಧಾನ ಇದೆ ಎಂಬ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಅದು ರಾಜ್ಯದ ಸಮಸ್ಯೆ ಏನಲ್ಲ, ಅದು ನಮ್ಮ ನಮ್ಮ ಸಮಸ್ಯೆ ಎನ್ನುವ ಮೂಲಕ ಸಿದ್ದರಾಮಯ್ಯ ಜೊತೆ ಭಿನ್ನಾಭಿಪ್ರಾಯ ಇದೆ ಎಂಬುದನ್ನು ಪರೋಕ್ಷವಾಗಿ ಒಪ್ಪಿಕೊಂಡರು.

ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರ ರಾಜ್ಯ ಸರ್ಕಾರ ಪಾಪರ್ ಆಗಿದೆ ಎಂಬ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ರಾಜ್ಯದಲ್ಲಿ ಇಷ್ಟೆಲ್ಲ ಯೋಜನೆಗಳಿವೆ, ದುಡ್ಡಿಲ್ಲದೆ ಈ ರೀತಿ ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದರು.

# ಬಸರಕೋಡ ಪವಾಡ ಬಸವೇಶ್ವರ ದೇವಾಲಯದ ಬೆಳ್ಳಿ ಪ್ರತಿಮೆ ಕಳ್ಳತನ

• **ಉದಯವಾಹಿನಿ, ಮುದ್ದೇಬಿಹಾಳ:**


ಉದಯವಾಹಿನಿ ಚಿತ್ರ

ತಾಲ್ಲೂಕಿನ ಬಸರಕೋಡ ಗ್ರಾಮದ ಐತಿಹಾಸಿಕ ಶ್ರೀ ಪವಾಡ ಬಸವೇಶ್ವರ ದೇವಾಲಯದಲ್ಲಿ ನಡೆದಿದ್ದ 32 ಕೆಜಿ ಬೆಳ್ಳಿಯ ಪ್ರತಿಮೆ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಚುರುಕುಗೊಂಡಿದ್ದು, ಪ್ರಕರಣದ ಭೇದಿಸಲು ಪೊಲೀಸರಿಗೆ ಮಹತ್ವದ ಸುಳಿವು ಲಭ್ಯವಾಗಿದೆ ಎಂದು ಬೆಳಗಾವಿ ಉತ್ತರ ವಲಯದ ಐಜಿಪಿ ಸಂದೀಪ್ ಪಾಟೀಲ್ ತಿಳಿಸಿದ್ದಾರೆ.ಮಂಗಳವಾರ ದೇವಾಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕಳ್ಳತನ ಪ್ರಕರಣವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದಾರೆ. ಆರೋಪಿಗಳನ್ನು ಪತ್ತೆ ಹಚ್ಚಲು ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಈಗಾಗಲೇ ಕಳ್ಳರ ಬಗ್ಗೆ ಹಾಗೂ ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖಸುಳಿವುಗಳು ಸಿಕ್ಕಿವೆ. ಶೀಘ್ರವೇ ಆರೋಪಿಗಳನ್ನು ಬಂಧಿಸಿ, ದೋಚಲಾದ 32 ಕೆಜಿ ಬೆಳ್ಳಿಯ ಪ್ರತಿಮೆಯನ್ನು ವಶಪಡಿಸಿಕೊಳ್ಳಲಾಗುವುದು, ಎಂದು ವಿಶ್ವಾಸ ವ್ಯಕ್ತಪಡಿಸಿದರು. ಘಟನೆಯಿಂದ ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿರುವುದನ್ನು ಗಮನದಲ್ಲಿಟ್ಟುಕೊಂಡು, ದೇವಾಲಯದ ಆಡಳಿತ ಮಂಡಳಿ ಭದ್ರತೆಯನ್ನು ಹೆಚ್ಚಿಸಲು ನಿರ್ಧರಿಸಿದೆ. ಈ ಕುರಿತು ಮಾತನಾಡಿದ ಆಡಳಿತ ಮಂಡಳಿ ಅಧ್ಯಕ್ಷ ಕೆ.ವೈ. ಬಿರಾದಾರ ಮತ್ತು ಸದಸ್ಯ ಶ್ರೀಶೈಲ ಮೇಟಿ, ಸದ್ಯ ದೇವಾಲಯದಲ್ಲಿರುವ 20 ಸಿಸಿಟಿವಿ ಕ್ಯಾಮರಾಗಳ ಜೊತೆಗೆ ಹೆಚ್ಚುವರಿಯಾಗಿ 15 ಕ್ಯಾಮರಾಗಳನ್ನು ಅಳವಡಿಸಲಾಗುತ್ತಿದೆ. ಅಲ್ಲದೆ, ದೇವಾಲಯಕ್ಕೆ ಹೊಸದಾಗಿ ಕಬ್ಬಿಣದ ಗೇಟ್ ಹಾಗೂ ಗ್ರೀಲ್ ಅಳವಡಿಕೆ, ಭದ್ರತಾ ಸಿಬ್ಬಂದಿಯ ನೇಮಕ ಮತ್ತು ಸ್ಟ್ರಾಂಗ್ ರೂಂ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ, ಎಂದು ತಿಳಿಸಿದರು. ಈ ಸಂದರ್ಭದಲ್ಲಿ ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ಡಿವೈಎಸ್ಪಿ ಚಂದ್ರಕಾಂತ ನಂದರೆಡ್ಡಿ, ಸಿಪಿಐ ಮಹಮ್ಮದ್ ಫಸಿಯುದ್ದೀನ್ ಸೇರಿದಂತೆ ಪೊಲೀಸ್ ಅಧಿಕಾರಿಗಳು ಹಾಗೂ ಆಡಳಿತ ಮಂಡಳಿಯ ಎಸ್ ಎಸ್ ಹಂಡರಗಲ್ಲ ಮತ್ತು ಅಪ್ಪು ನಾಡಗೌಡ, ವಿರೇಶ ಮಂಕಣಿ ಉಪಸ್ಥಿತರಿದ್ದರು.

# ಮಣ್ಣೆತ್ತಿನ ಅಮಾವಾಸ್ಯೆ ಆಚರಣೆ: ಬರದ ನಡುವೆಯೂ ರೈತರ ಸಂಭ್ರಮ

• **ಉದಯವಾಹಿನಿ, ಲಕ್ಷ್ಮೇಶ್ವರ:**

ಕೃಷಿಯೇ ಪ್ರಧಾನವಾಗಿರುವ ಭಾರತದಲ್ಲಿ ಎತ್ತುಗಳು ರೈತನ ಒಡನಾಡಿಗಳಾಗಿವೆ. ಎತ್ತುಗಳನ್ನು ಪೂಜ್ಯ ಭಾವನೆಯಿಂದ ಕಾಣುವ ಪರಂಪರೆ ಗ್ರಾಮೀಣ ಭಾಗದಲ್ಲಿ ಇಂದಿಗೂ ಉಳಿದಿದೆ. ಇದರ ಭಾಗವಾಗಿ ಮಣ್ಣೆತ್ತಿನ ಅಮಾವಾಸ್ಯೆ ಆಚರಣೆಯ ಸಂಭ್ರಮ ಗ್ರಾಮಸ್ಥರಲ್ಲಿ ಮನೆ ಮಾಡಿದೆ.

ಕುಂಬಾರರು ಮಣ್ಣಿನಿಂದ ತಯಾರಿಸಿದ ಜೋಡೆತ್ತುಗಳನ್ನು ಖರೀದಿಸಿ, ಅವುಗಳಿಗೆ ಪೂಜೆ ಸಲ್ಲಿಸುವುದು ಮಣ್ಣೆತ್ತಿನ ಅಮಾವಾಸ್ಯೆಯ ವಿಶೇಷತೆ. ಉತ್ತರ ಕರ್ನಾಟಕದ ಎಲ್ಲ ಗ್ರಾಮಗಳಲ್ಲಿ ಈ ಹಬ್ಬವನ್ನು ಅತ್ಯಂತ ಸಡಗರ ಮತ್ತು ಭಕ್ತಿಯಿಂದ ಆಚರಿಸಲಾಗುತ್ತದೆ. ಕೃಷಿ ಕಾಯಕದಲ್ಲಿ ತಮ್ಮೊಂದಿಗೆ ಶ್ರಮಿಸುವ ಎತ್ತುಗಳಿಗೆ ರೈತರು ಹೆಚ್ಚಿನ ಮಹತ್ವ ಕೊಡುತ್ತಾರೆ.


ಉದಯವಾಹಿನಿ ಚಿತ್ರ

ಆಷಾಢ ಮಾಸದಲ್ಲಿ ಬರುವ ಈ ಹಬ್ಬ ವಿಶೇಷತೆಗಳಿಂದ ಕೂಡಿದೆ. ಎತ್ತುಗಳಿಗೆ ಕೃತಜ್ಞತೆ ಸಲ್ಲಿಸುವುದೇ ಹಬ್ಬದ ಉದ್ದೇಶ. ಅಮಾವಾಸ್ಯೆಯಂದು ರೈತರು, ಎತ್ತುಗಳನ್ನು ಸ್ವಚ್ಛಗೊಳಿಸಿ ಕೊಂಬುಗಳಿಗೆ ಬಣ್ಣ ಹಚ್ಚಿ, ಹೂಮಾಲೆಗಳಿಂದ ಆಲಂಕರಿಸುತ್ತಾರೆ. ಕುತ್ತಿಗೆಗೆ ಗೆಜ್ಜೆ ಸರ, ಗಂಟೆಗಳನ್ನು ಕಟ್ಟಿ ಸಿಂಗರಿಸುತ್ತಾರೆ. ಊರಿನಲ್ಲಿ ಮೆರವಣಿಗೆಯನ್ನೂ ಮಾಡುತ್ತಾರೆ.

ಕೆಲವರು, ಮಣ್ಣಿನಿಂದ ತಯಾರಿಸಿದ ಎತ್ತುಗಳಿಗೆ ಭಕ್ತಿಯಿಂದ ಪೂಜಿಸುತ್ತಾರೆ. ಕುಚಗಡಬುಗಳನ್ನು ಸಿದ್ಧಪಡಿಸಿ, ನೈವೇದ್ಯ ಸಮರ್ಪಿಸುತ್ತಾರೆ. ಕೃಷಿಕ್ಷೇತ್ರದಲ್ಲಿ ಬೃಹತ್ ಯಂತ್ರೋಪಕರಣಗಳು ಕಾಲಿಟ್ಟಿದ್ದು, ಎತ್ತುಗಳ ಮಹತ್ವ ನೇಪತ್ಯಕ್ಕೆ ಸರಿಯುತ್ತಿದೆ. ಯುವ ರೈತರು ಎತ್ತುಗಳ ಸಾಕಣೆ ಮುಂದಾಗುತ್ತಿಲ್ಲ. ಆದರೂ, ಗ್ರಾಮೀಣ ಭಾಗಗಳಲ್ಲಿ ಮಣ್ಣೆತ್ತಿನ ಅಮಾವಾಸ್ಯೆಯು ತನ್ನ ಮಹತ್ವ ಕಳೆದುಕೊಂಡಿಲ್ಲ' ಎಂದು ಗ್ರಾಮಸ್ಥರು ಹೇಳಿದರು. ಮಣ್ಣಿನ ಎತ್ತುಗಳ ದರ ಹೆಚ್ಚಳ ಬಣ್ಣಗಳ ಬೆಲೆಹೆಚ್ಚಾದ ಕಾರಣ ಕುಂಬಾರರು ಮಣ್ಣಿನ ಎತ್ತುಗಳ ಬೆಲೆಯನ್ನೂ ಹೆಚ್ಚಿಸಿದ್ದಾರೆ. ಆಕಾರಕ್ಕೆ ತಕ್ಕಂತೆ ಬೆಲೆ ನಿಗದಿ ಮಾಡಲಾಗಿದೆ.

# ಕಾಲುವೆಗಳಿಗೆ ನೀರು ಹರಿಸಲು ವಿಳಂಬ ರೈತರೊಂದಿಗೆ ಚರ್ಚೆ ಇಂದು ಆಗಮಿಸಬೇಕು :ಮಾಜಿ ಸಚಿವ ಎಸ್ ಕೆ ಬೆಳ್ಳುಳ್ಳಿ

• **ಉದಯವಾಹಿನಿ, ಕೊಲ್ಹಾರ:**

ಅವಳಿ ಜಿಲ್ಲೆಗಳ ಏತ ನೀರಾವರಿ ಯೋಜನೆಗಳಿಗೆ ನೀರು ಬಿಡಲು ವಿಳಂಬ ಮಾಡುತ್ತಿರುವ ಸರ್ಕಾರದ ಕ್ರಮವನ್ನು ಖಂಡಿಸಿ ರೈತರೊಂದಿಗೆ ಚರ್ಚಿಸಲು ಬುಧವಾರ ಜುಲೈ 15 ರಂದು ಬೆಳಗ್ಗೆ 10.30ಕ್ಕೆ ತಾಲ್ಲೂಕಿನ ಮಟ್ಟಿಹಾಳ ಕ್ರಾಸ್ ನಲ್ಲಿ ಸಭೆ ಕರೆಯಲಾಗಿದ್ದು ಈ ಸಭೆಗೆ ಜಿಲ್ಲೆಯ ಎಲ್ಲ ರೈತ ಬಾಂಧವರು ಆಗಮಿಸಬೇಕು ಎಂದು ಮಾಜಿ ಸಚಿವ ಎಸ್ ಕೆ ಬೆಳ್ಳುಳ್ಳಿ ಮನವಿ ಮಾಡಿದ್ದಾರೆ.

ಪಟ್ಟಣದ ಸ್ವಗೃಹದಲ್ಲಿ ಕರೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ,ಈಗಾಗಲೇ ನಾವು ಜಿಲ್ಲೆಗಳಲ್ಲಿರುವ ಏತ ನೀರಾವರಿಗಳನ್ನು ಪ್ರಾರಂಭಿಸಿ ಅವುಗಳನ್ನು ಶಾಶ್ವತವಾಗಿ ನೀರಾವರಿ ಸಲಹಾ ಸಮಿತಿಯಿಂದ ತೆಗೆದು ಹಾಕಬೇಕು ಮತ್ತು ಪ್ರಸಕ್ತ ಮುಂಗಾರು ಮಳೆ ಸರಿಯಾಗಿ ಆಗದಿರುವುದರಿಂದ ಮತ್ತು ಕೃಷ್ಣಾ ನದಿಗೆ ತಡವಾಗಿ ನೀರು ಬಂದಿರುವುದರಿಂದ ರೈತರು ಬೆಳೆದ ಬೆಳೆಗಳಿಗೆ ನೀರು ಇಲ್ಲದೆ ಬೆಳೆಗಳು ಒಣಗುವ ಭೀತಿ ಇರುವುದರಿಂದ ಮತ್ತು ಕುಡಿಯುವ ನೀರಿನ ಸಲುವಾಗಿ

**ಏತ ನೀರಾವರಿ ಯೋಜನೆಗಳಿಗೆ ನೀರು ಬಿಡಲು ವಿಳಂಬ**


ಉದಯವಾಹಿನಿ ಚಿತ್ರ

ನೀರು ಹರಿಸಬೇಕು ಎಂದು

ಈಗಾಗಲೇ ನೀರಾವರಿ ಮಂತ್ರಿಗಳಿಗೆ, ಕೆಬಿಜೆಎನ್ನೆಲ್ ಎಂ.ಡಿ ರವರಿಗೆ ಈ ಕುರಿತು ಪತ್ರಗಳನ್ನು ಬರೆದಿದ್ದೇವೆ. ಅವಳಿ ಜಿಲ್ಲೆಗಳ ಏತ ನೀರಾವರಿಗಳ ಯೋಜನೆಗಳಿಗೆ ಭೂಮಿಯನ್ನು ಕಳೆದುಕೊಂಡ ರೈತರಿಗೆ ಅನ್ಯಾಯವಾಗುತ್ತಿದ್ದು ಅದರ ಶಾಶ್ವತ ಪರಿಹಾರವಾಗಬೇಕು ಮುಳವಾಡ ಏತ ನೀರಾವರಿ, ಚಿಮ್ಮಲಗಿ ಏತ ನೀರಾವರಿ, ಗುತ್ತಿ ಬಸವಣ್ಣ ಏತ ನೀರಾವರಿ, ಆಲಮಟ್ಟಿ ಎಡ ಮತ್ತು ಬಲ ಇರತಕ್ಕಂತಹ ಏತ ನೀರಾವರಿಗಳ ಮೂಲಕ ನೀರು ಬಿಡಬೇಕು, ಆಲಮಟ್ಟಿ ಡ್ಯಾಂ ನಿರ್ಮಾಣಕ್ಕೆ ಸದರಿ ಏತ ನೀರಾವರಿಯ ಭಾಗದ ರೈತರು ಜಮೀನು ಮತ್ತು ಮನೆಗಳನ್ನು ಕಳೆದುಕೊಂಡಿದ್ದು, ಆದ್ದರಿಂದ ಸದರಿ ಏತ ನೀರಾವರಿಗಳನ್ನು ಅವಳಿ ಜಿಲ್ಲೆಯ ನೀರು ನಿರ್ವಹಣಾ ಸಲಹಾ ಸಮಿತಿ ವ್ಯಾಪ್ತಿಗೆ ಒಳಪಡಿಸಬಾರದು ಎಂದರು.

ಜುಲೈ 14 ರ ಒಳಗಾಗಿ ನೀರು ಬಿಡದೆ ಇದ್ದರೆ ಉಗ್ರ ಹೋರಾಟ ಮಾಡಲಾಗುವುದು ಹಾಗೂ ರೈತರೊಂದಿಗೆ ಸೇರಿ ನಾವೇ ಕಾಲುವೆಗಳಿಗೆ ನೀರು ಹರಿಸುತ್ತೇವೆ ಎಂದು ಈ ಮೊದಲು ಹೇಳಿದ್ದೇವೆ ಆದರೆ ನಮ್ಮ ಮನವಿಗೆ ಇನ್ನೂ ಕೂಡ ಸ್ಪಂದನೆ ಮಾಡುತ್ತಿಲ್ಲದ ಕಾರಣ ಈ ವಿಷಯವನ್ನು ರೈತರೊಂದಿಗೆ ಚರ್ಚಿಸಲು ಸಭೆ ಕರೆಯಲಾಗಿದ್ದು ಜಿಲ್ಲೆಯ ಎಲ್ಲಾ ರೈತರು ಈ ಸಭೆಗೆ ಆಗಮಿಸಬೇಕು ಹಾಗೂ ಒಂದು ವೇಳೆ ಇಂದು ಅಥವಾ ನಾಳೆ ನೀರನ್ನು ಬಿಟ್ಟರೆ ಅಲ್ಲಿಯೇ ಸೇರಿದ ರೈತರೊಂದಿಗೆ ಸ್ವಾಗತಿಸುತ್ತೇವೆ ಎಂದರು. ಈ ಸಂದರ್ಭದಲ್ಲಿ ಬಸಪ್ಪ ಗೌಡ ಮನಗೂಳಿ, ಚಂದ್ರು ನಟ್ಟೆಕಟ್ಟಿ ಪರಮಾನಂದ ಬರಗಿ ಇದ್ದರು

# ಕಂಡು ಕೇಳರಿಯದ ದೊಡ್ಡ ಸ್ಕ್ಯಾಮ್ ನಡೆದಿದೆ: ಎಂಎಲ್‌ಸಿ ಸಿ.ಟಿ ರವಿ ಆರೋಪ

**ಕಿಂಗ್‌ಪಿನ್‌ಗಳು ಯಾರಿದ್ದಾರೆ ಅವರನ್ನು ತನಿಖೆ ನಡೆಸಿ, ಬಂಧಿಸುವ ಕೆಲಸ ಆಗಬೇಕು.ಕೇಂದ್ರ ಸರ್ಕಾರದ ತನಿಖಾ ಎಜೆನ್ಸಿಯಿಂದ ಸೂಕ್ತ ತನಿಖೆ ಮಾಡಿಸುವುದೇ ಸೂಕ್ತ.**

• **ಉದಯವಾಹಿನಿ, ಚಿಕ್ಕಮಗಳೂರು :**

ಜಿಲ್ಲೆಯ ಇತಿಹಾಸದಲ್ಲಿಯೇ ಕಂಡು ಕೇಳರಿಯದ ದೊಡ್ಡ ಹಗರಣವೊಂದು ನಡೆದಿರುವಂತದ್ದು ಆಘಾತಕಾರಿ ಎಂದು ವಿಧಾನ ಪರಿಷತ್ ಸದಸ್ಯ ಸಿ. ಟಿ. ರವಿ ಅವರು ಹೇಳಿದ್ದಾರೆ.

ನಗರದಲ್ಲಿ ಮಂಗಳವಾರ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ಚಿಕ್ಕಮಗಳೂರಿನಲ್ಲಿ ಬಡವರ ದಾಖಲೆಗಳನ್ನು ಪಡೆದು ಅವರಿಗೆ ಗೊತ್ತಿಲ್ಲದ ರೀತಿ ಅವರ ಬ್ಯಾಂಕ್ ಖಾತೆಯಲ್ಲಿ ಕೋಟ್ಯಂತರ ರೂಪಾಯಿ ವರ್ಗಾವಣೆ ಮಾಡಲಾಗಿದೆ ಎಂದ ಅವರು, ಬ್ಯಾಂಕ್ ಖಾತೆಯಲ್ಲಿ ಅಕ್ರಮ ಹಣ ವಹಿವಾಟುಗಳು ನಡೆದಿವೆ ಎಂದು ಆರೋಪಿಸಿದ್ದಾರೆ.

ಬಡವರ ಆಧಾರ್ ಕಾರ್ಡ್ ಪಡೆದು, ಬಡವರ ಹೆಸರಿನಲ್ಲಿ ಇಂಡಸ್‌ಇಂಡ್ ಬ್ಯಾಂಕ್‌ನಲ್ಲಿ, ಆಕ್ಸಿಸ್ ಬ್ಯಾಂಕ್‌ನಲ್ಲಿ, ಕೊಟಕ್ ಮಹೇಂದ್ರ ಬ್ಯಾಂಕ್‌ನಲ್ಲಿ, ಹೆಚ್‌ಡಿಎಫ್‌ಸಿ ಬ್ಯಾಂಕ್, ಐಡಿಎಫ್‌ಸಿ ಬ್ಯಾಂಕ್, ಎಸ್‌ಬಿಐ, ಆರ್‌ಬಿಎಲ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಫೆಡರಲ್ ಬ್ಯಾಂಕ್ ಹೀಗೆ ವಿವಿಧ ಬ್ಯಾಂಕುಗಳಲ್ಲಿ ಬಡವರ ಆಧಾರ್ ಕಾರ್ಡ್ ಪಡೆದು, ನಿಮಗೆ ಸರ್ಕಾರದಿಂದ ಹಣ ಬರುತ್ತೆ, ನಿಮಗೆ ಮೋದಿ ದುಡ್ಡು ಬರುತ್ತೆ ಅಂತ ಹೇಳಿ, ಅವರದೇ ಸಿಮ್ ಕಾರ್ಡ್ ಕೊಟ್ಟು, ಬ್ಯಾಂಕ್ ಖಾತೆ ತೆರೆದು, ಲಕ್ಷಾಂತರ

**ಇತಿಹಾಸದಲ್ಲಿಯೇ ಕಂಡು ಕೇಳರಿಯದ ದೊಡ್ಡ ಹಗರಣ**


ಉದಯವಾಹಿನಿ ಚಿತ್ರ

> **ಕೆಲವು ತಿಂಗಳ ಹಿಂದೆ ಶಿವಮೊಗ್ಗದಲ್ಲಿ ಒಂದು ಪ್ರಕರಣ ದಾಖಲಾಗಿತ್ತು. 87 ಕೋಟಿ ರೂಪಾಯಿ ಟರ್ನ್ ಓವರ್ ಆಗಿತ್ತು. ಶಿವಮೊಗ್ಗದವರು ಇಬ್ಬರು, ಚಿಕ್ಕಮಗಳೂರಿನವರು ಒಬ್ಬರು. ಇವರನ್ನು ಈ ಹಿಂದೆ ಅರೆಸ್ಟ್ ಮಾಡಿದ್ರು. ಶಿವಮೊಗ್ಗದ ಜಗದೀಶ್, ಅನಂತ್ ಹಾಗೂ ಚಿಕ್ಕಮಗಳೂರಿನ ಅರ್ಶದ್ ಅರೆಸ್ಟ್ ಆಗಿದ್ರು. ಆ ಸಂದರ್ಭದಲ್ಲೇ ಜಿಲ್ಲೆಯ ಪೊಲೀಸ್ ಇಲಾಖೆ ಎಚ್ಚೆತ್ತುಕೊಳ್ಳಬೇಕಾಗಿತ್ತು ಎಂದರು.**
> **-ಎಂಎಲ್‌ಸಿ. ಸಿ ಟಿ ರವಿ**

ರೂಪಾಯಿಗಳ, ಕೆಲವು ಖಾತೆಗಳಲ್ಲಿ ಕೋಟ್ಯಂತರ ರೂಪಾಯಿಗಳ ಅಕ್ರಮ ವಹಿವಾಟನ್ನು ಖಾತೆದಾರರಿಗೆ ಗೊತ್ತಿಲ್ಲದಂತೆ ನಡೆಸಿರುವ ಮಾಹಿತಿ ಲಭ್ಯವಾಗಿದೆ ಎಂದಿದ್ದಾರೆ.

ಈ ತರಹದ ಸಾವಿರಾರು ಜನರ ಹೆಸರಿನಲ್ಲಿ ಖಾತೆ ತೆರೆದಿದ್ದಾರೆ. ಎಲ್ಲದಕ್ಕೂ ಸಿಮ್ ಕಾರ್ಡ್‌ನ್ನು ಅವರೇ ಪರ್ಚೇಸ್ ಮಾಡಿ, ಅವರೇ ಇಟ್ಟುಕೊಂಡಿದ್ದಾರೆ. ಬ್ಯಾಂಕ್ ಪಾಸ್ ಬುಕ್, ಎಟಿಎಂ ಕಾರ್ಡ್‌ನ್ನು ಕೂಡ ಅವರೇ ಇಟ್ಟುಕೊಂಡಿದ್ದಾರೆ. ಅಮಾಯಕರು ತಮಗೆ

> **ಕೆಲವರು ದುಬೈನಲ್ಲಿ ಇದರ ಕಿಂಗ್‌ಪಿನ್ ಇದ್ದಾರೆ ಅಂತ ಹೇಳ್ತಾರೆ. ಈ ಎಲ್ಲದರ ಸಮಗ್ರ ತನಿಖೆ ಆಗಬೇಕು. ನನಗನಿಸುತ್ತೆ ಈ ತನಿಖೆ ಸಿಬಿಐ ಮತ್ತು ಇಡಿ ಮೂಲಕ ಆಗುವುದು ಸೂಕ್ತ. ನಾವು ಕೂಡ ಕೇಂದ್ರದ ಗೃಹ ಸಚಿವರಿಗೆ ಮತ್ತು ರಾಜ್ಯದ ಮುಖ್ಯಮಂತ್ರಿಗಳಿಗೆ, ಸಿಬಿಐ ಮತ್ತು ಇಡಿ ಮೂಲಕ ತನಿಖೆ ನಡೆಸುವುದಕ್ಕೆ ಮನವಿ ಮಾಡಿಕೊಳ್ಳುತ್ತೇವೆ ಎಂದಿದ್ದಾರೆ.**
> **-ಎಂಎಲ್‌ಸಿ. ಸಿ ಟಿ ರವಿ**

ಸಿಗಬಹುದಾದ ಅಲ್ಪ ಹಣದ ಆಸೆಗೆ, ಕೆಲವೊಬ್ರು ಬ್ರೋಕರ್‌ಗಳು ಅವರನ್ನು ಮನವೊಲಿಸಿದ ಕಾರಣಕ್ಕೆ ಅವರು ತಮ್ಮ ಆಧಾರ್ ಕಾರ್ಡ್ ಅನ್ನು ಮತ್ತು ಪಾನ್ ಕಾರ್ಡ್ ಅನ್ನು ಕೊಟ್ಟಿದ್ದಾರೆ. ಇವರ ಹೆಸರಿನಲ್ಲಿ ಚಲಾವಣೆಯಾದ ಹಣದ ಮೂಲ ಯಾವುದು? ಇದರ ಸಮಗ್ರ ತನಿಖೆ ಆಗಬೇಕು ಎಂದು ಹೇಳಿದ್ದಾರೆ.

ಯಾವುದಕ್ಕಾಗಿ ಬಡವರ ಖಾತೆಗೆ ಹಣ ಹಾಕಿ, ಹಣ ತೆಗೆದಿದ್ದಾರೆ?, ಎಲ್ಲಾ ಕಡೆಯಲ್ಲೂ ಬಡವರೇ ಟಾರ್ಗೆಟ್ ಯಾಕೆ?.ಅದು ಪೌರ ಕಾರ್ಮಿಕರು, ಮನೆಗೆಲಸದವರು, ಕಾರ್ಪೆಂಟರ್ಸ್, ಕೂಲಿ ಮಾಡುವವರು ಮತ್ತು ಹೆಚ್ಚಿನ ಭಾಗ ಅವಿದ್ಯಾವಂತರು. ಇವರನ್ನೇ ಯಾಕೆ ಬಳಕೆ ಮಾಡಿಕೊಂಡಿದ್ದಾರೆ? ಎಂದು ಪ್ರಶ್ನಿಸಿರುವ ಅವರು, ಇದರ ಸಮಗ್ರ ತನಿಖೆ ಆಗಬೇಕು ಎಂದು ಆಗ್ರಹಿಸಿದ್ದಾರೆ.

### ಹಣದ ಮೂಲ ಯಾವುದು?

**ಮತ್ತೆ ಹಣದ ಮೂಲ ಯಾವುದು? ಕೆಲವರು ಆನ್‌ಲೈನ್ ಬೆಟ್ಟಿಂಗ್‌ನ ಹಣವನ್ನು ಈ ರೀತಿ ಇವರ ಖಾತೆಗಳಿಗೆ ಹಾಕಿ ತೆಗೆದಿದ್ದಾರೆ ಅಂತ ಹೇಳ್ತಾರೆ. ಇನ್ನೂ ಕೆಲವರು ಅನುಮಾನ ವ್ಯಕ್ತಪಡಿಸಿದ್ದಾರೆ, ಡಿಜಿಟಲ್ ಅರೆಸ್ಟ್ ಮೂಲಕ ಅವರ ಖಾತೆಯಲ್ಲಿದ್ದಂತಹ ಹಣವನ್ನು ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡಿದ್ದಾರೆ ಎಂಬಂತಹ ಮಾತನ್ನು ಕೂಡ ಹೇಳ್ತಾರೆ. ಬೆಟ್ಟಿಂಗ್ ಆ್ಯಪ್, ಡಿಜಿಟಲ್ ಅರೆಸ್ಟ್ ಖಾತೆ ಅಂತ ಹೇಳ್ತಾರೆ, ಮನಿ ಟ್ರಾನ್ಸ್‌ಫರ್ ಮಾಡಿಕೊಂಡಿರೋದು ಅಂತ, ಇನ್ನೂ ಕೆಲವು ಅಕೌಂಟ್ ಹ್ಯಾಕ್ ಮಾಡಿ, ಮನಿ ಟ್ರಾನ್ಸ್‌ಫರ್ ಮಾಡಿಕೊಂಡಿರೋದು ಎಂಬಂತಹ ಮಾತನ್ನು ಕೂಡ ಹೇಳ್ತಾರೆ. ಆದರೆ, ಕೋಟ್ಯಂತರ ರೂಪಾಯಿಗಳ ಅವ್ಯವಹಾರ ಆಗಿರೋದು ಬಹಳ ಸ್ಪಷ್ಟವಾಗಿ ಕಾಣ್ತಾ ಇದೆ ಎಂದು ಸಿ ಟಿ ರವಿ ಹೇಳಿದ್ದಾರೆ.**


ಉದಯವಾಹಿನಿ

ಪ್ರಾದೇಶಿಕ

ಬುಧವಾರ 15 ಜುಲೈ 2026




## ಮಿನಿ ನ್ಯೂಸ್

### ಸಂಶಿ ಸರ್ಕಾರಿ ಶಾಲೆಯಲ್ಲಿ ಕೊಠಡಿಗಳ ಕೊರತೆ

• **ಉದಯವಾಹಿನಿ, ಸಂಶಿ:**

ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಕೊರತೆ ಒಂದೆಡೆಯಾದರೆ ಇನ್ನೊಂದೆಡೆ ಕೊಠಡಿಗಳ ಕೊರತೆಯಿಂದ ಪ್ರವೇಶ ನಿರಾಕರಿಸುವಂತಾಗಿದೆ ಕುಂದಗೋಳ ತಾಲ್ಲೂಕಿನ ಸಂಶಿ ಗ್ರಾಮದ ನೀಲಮ್ಮ ಚ ಅಕ್ಕಿ ಸರ್ಕಾರಿ ಪ್ರೌಢಶಾಲೆಯಲ್ಲಿ 8 ರಿಂದ 10ನೇ ತರಗತಿಯಲ್ಲಿ ಒಟ್ಟು 295 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇರುವ 5 ಕೊಠಡಿಗಳಲ್ಲಿ 9 ಹಾಗೂ 10ನೇ ತರಗತಿಯನ್ನು ಎ.ಬಿ ಎಂದು ವಿಂಗಡಿಸಿ ತರಗತಿ ನಡೆಸಲಾಗುತ್ತಿದೆ.

ಮುಖ್ಯ ಶಿಕ್ಷಕಿಯ ಕೊಠಡಿಯಲ್ಲಿ ಶಾಲಾ ಸಾಮಗ್ರಿಗಳನ್ನು ಇಡಲಾಗಿದೆ ಗ್ರಂಥಾಲಯ ಕೊಠಡಿಯ ಒಂದು ಭಾಗದಲ್ಲಿ ಶಿಕ್ಷಕರ ಸ್ಟಾಫ್ ರೂಂ ಮಾಡಲಾಗಿದೆ ಹಾಗೂ ಇಲ್ಲಿಯೇ ಬಿಸಿ ಊಟ, ನಿತ್ಯ ಮೊಟ್ಟೆ ಬೇಯಿಸಿ ಮಕ್ಕಳಿಗೆ ವಿತರಿಸುತ್ತಿದ್ದಾರೆ. ವಿಜ್ಞಾನದ ಪ್ರಯೋಗಾಲಯದ ಸಾಮಗ್ರಿಗಳು ಮೂಲೆ ಸೇರಿಕೊಂಡಿವೆ. ಕ್ರೀಡಾ ಸಾಮಗ್ರಿಗಳು ಇಡಲು ಸ್ಥಳ ಅವಕಾಶವಿಲ್ಲದೇ ಒಂದರ ಮೇಲೊಂದು ಇಡುವ ಪರಿಸ್ಥಿತಿ ನಿರ್ಮಾಣವಾಗಿದೆ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಒಂದೇ ಇರುವುದರಿಂದ ದಾಖಲಾತಿ ಹೆಚ್ಚಾಗಿದ್ದು 9 ನೇ ತರಗತಿಯಲ್ಲಿ 135, 10ನೇ ತರಗತಿಯಲ್ಲಿ 126 ವಿದ್ಯಾರ್ಥಿಗಳಿದ್ದು 8ನೇ ತರಗತಿಗೆ 34 ವಿದ್ಯಾರ್ಥಿಗನ್ನು ಮಾತ್ರ ಪ್ರವೇಶ ಪಡೆಯಲಾಗಿದೆ. ಕೊಠಡಿ ಕೊರತೆಯಿಂದಾಗಿ 8ನೇ ತರಗತಿಗೆ ಇನ್ನಷ್ಟು ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶ ಇಲ್ಲದಂತಾಗಿದೆ.

### 'ಇದು ಸತ್ಯಕ್ಕೆ ಸಂದ ಜಯ'

• **ಉದಯವಾಹಿನಿ, ದಾವಣಗೆರೆ:**

ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ದಾವಣಗೆರೆ ಜಿಲ್ಲಾ ಪೋಕ್ಸೋ ಕೋರ್ಟ್‌ಗೆ ಆಗಮಿಸಿ ಜಾಮೀನು ಪ್ರಕ್ರಿಯೆ ಮುಗಿಸಿದರು.ಬಳಿಕ ಮಾತನಾಡಿದ ಅವರು ಷರತ್ತುಬದ್ಧ ಜಾಮೀನು

ನೀಡಿರುವ ಪೋಕ್ಸೋ ನ್ಯಾಯಾಲಯವನ್ನು ಗೌರವಿಸುತ್ತೇವೆ ಕಾನೂನನ್ನು ಪರಿಪಾಲಿಸುತ್ತೇವೆ. ಇದು ಸತ್ಯಕ್ಕೆ ಸಂದ ಜಯ. ಮಠದ ಭಕ್ತರು ಹಾಗೂ ವಕೀಲ ವೃಂದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ವಕೀಲರಾದ ಎಸ್.ವಿ.ಪಾಟೀಲ್ ಅವರು ನ್ಯಾಯಾಲಯಕ್ಕೆ ಸೂಕ್ತ ದಾಖಲೆಗಳನ್ನು ಒದಗಿಸಿದರು. ಅಖಂಡ ಇತಿಹಾಸ ನೋಡಿದಾಗ ಯಾರೆಲ್ಲ ಹೋರಾಟ ಮಾಡಿದ್ದಾರೆಯೋ ಅವರಿಗೆಲ್ಲ ನಿಂದನೆ, ಅಪವಾದಗಳು ಬರುವುದು ಸಹಜ. ಶಂಕರಾಚಾರ್ಯರಿಂದ ಹಿಡಿದು ಇಲ್ಲಿಯತನಕ ಪ್ರತಿಯೊಬ್ಬರಿಗೂ ನೋವುಗಳನ್ನು, ಕಷ್ಟಗಳನ್ನು ಕೊಟ್ಟಿದ್ದಾರೆ ಎಂದರು.

ಸನ್ಯಾಸತ್ವ ಎಂಬುದು ಹೂವಿನ ಹಾಸಿಗೆ ಅಲ್ವೇ ಅಲ್ಲ. ಅಗ್ನಿಪಥ ಕೊನೆಗೆ ಉಳಿಯುವುದು ಸತ್ಯ, ಧರ್ಮ, ನ್ಯಾಯ. ಅದನ್ನೇ ನಾವು ಪಾಲಿಸುತ್ತಿದ್ದೇವೆ. ಪ್ರಕರಣ ನ್ಯಾಯಾಲಯದಲ್ಲಿ ಇರುವ ಕಾರಣ ಇಷ್ಟು ಮಾತ್ರ ಹೇಳಲು ಇಚ್ಛೆಪಡುತ್ತೇನೆ. ಲಿಂಗೈಕ್ಯ ಮಹಾಂತ ಶಿವಚಾರ್ಯ ಸ್ವಾಮೀಜಿಗಳು ಡೈರಿಯಲ್ಲಿ ಬರೆದು ಹೋಗಿದ್ದಾರೆ. ಅದು ಎಲ್ಲಾ ಭಕ್ತರಿಗೆ ಗೊತ್ತಿದೆ. ನಾವು ಹರಿಹರದ ಸ್ವಾಮೀಜಿ ಎಂದು ಗೊತ್ತಾಗ್ತಾ ಇರಲಿಲ್ಲ

### ಭೀಮನ ಮೇಲೆ ಕಲ್ಲು


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಹಾಸನ:**

ಜನರ ಅಚ್ಚುಮೆಚ್ಚಿನ ಕಾಡಾನೆ ಭೀಮನ ಮೇಲೆ ಅಸ್ಸಾಂ ಮೂಲದ ಕಾರ್ಮಿಕನೊಬ್ಬ ಕಲ್ಲು ತೂರಾಟ ನಡೆಸಿದ ಘಟನೆ ಸಕಲೇಶಪುರದ ಒಸ್ಸೂರು ಎಸ್ಟೇಟ್‌ನಲ್ಲಿ ನಡೆದಿದೆ. ಈ ವೇಳೆ ಸಿಟ್ಟಿಗೆದ್ದ ಭೀಮ ಘೀಳಿಟ್ಟು ಕಾರ್ಮಿಕನತ್ತ ನುಗ್ಗಲು ಯತ್ನಿಸಿದೆ.

ಅಸ್ಸಾಂನಿಂದ ಬಂದ ಕಾರ್ಮಿಕ ನೆಲೆಸಿದ್ದ ಲೈನ್ ಮನೆಗಳ ಬಳಿ ಇಂದು (ಜು.14) ಬೆಳಿಗ್ಗೆ ಕಾಡಾನೆ ಭೀಮ ಸಾಗುತ್ತಿತ್ತು. ಈ ವೇಳೆ ಕಾಡಾನೆಗೆ ಕಲ್ಲುಗಳಿಂದ ಹೊಡೆದು ಹುಚ್ಚಾಟ ಪ್ರದರ್ಶಿಸಿದ್ದಾನೆ. ಪದೇ ಪದೇ ಕಲ್ಲು ತೂರಿ ಕೀಟಲೆ ಮಾಡಿದ್ದಕ್ಕೆ ಘೀಳಿಡುತ್ತಾ ತಿರುಗಿ ತಿರುಗಿ ನೋಡುತ್ತ ಭೀಮ ಓಡಿ ಹೋಗಿದೆ ಅಸ್ಸಾಂ ಕಾರ್ಮಿಕನ ನಡೆಗೆ ಸ್ಥಳೀಯರು ಹಾಗೂ ಪ್ರಾಣಿ ಪ್ರಿಯರ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಯಾರಿಗೂ ತೊಂದರೆ ಕೊಡದ ಸೌಮ್ಯ ಸ್ವಭಾವದ ಕಾಡಾನೆ ಭೀಮನಿಗೆ ಕಲ್ಲಿನಿಂದ ಹೊಡೆದು ಹಿಂಸಿಸಿರುವ ದುರುಳನ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಹಾಗೂ ಪ್ರಾಣಿ ಪ್ರಿಯರು ಒತ್ತಾಯಿಸಿದ್ದಾರೆ ಕಾಡಾನೆ ಭೀಮನಿಗೆ ಪುಂಡ ಕಲ್ಲಿನಿಂದ ಹೊಡೆಯುವ ದೃಶ್ಯ ಮೊಬೈಲ್‌ನಲ್ಲಿ ಸೆರೆಯಾಗಿದೆ. ಹಾಸನ ಜಿಲ್ಲೆಯ ಮಲೆನಾಡು ಭಾಗದ ಜನರ ಪ್ರೀತಿಗೆ ಪಾತ್ರವಾಗಿರುವ ಕಾಡಾನೆ ಭೀಮ ಗ್ರಾಮದೊಳಗೆ, ವಾಹನ ದಟ್ಟಣೆ ಇರುವ ರಸ್ತೆಗಳಲ್ಲಿ ಸಲಿಸಾಗಿ ಓಡಾಡುತ್ತದೆ


### ಹಡಪದ-ಸವಿತಾ ಸಮಾಜ ಸಭೆ; ಹಲವು ನಿರ್ಣಯ ಕೈಗೊಳ್ಳಲಾಯಿತು

• **ಉದಯವಾಹಿನಿ, ಕಾರಟಗಿ:**

ಪಟ್ಟಣದ ಬಸವೇಶ್ವರ ನಗರದ ಚಿಕ್ಕ ಅಯ್ಯಪ್ಪ ದೇವಸ್ಥಾನದಲ್ಲಿ ತಾಲ್ಲೂಕು ಹಡಪದ ಮತ್ತು ಸವಿತಾ ಸಮಾಜ ಸಭೆ ನಡೆದು, ವಿವಿಧ ವಿಷಯಗಳ ಬಗ್ಗೆ ಚರ್ಚಿಸಿ, ನಿರ್ಣಯ ಕೈಗೊಳ್ಳಲಾಯಿತು.

ಸಮುದಾಯ ಭವನ ನಿರ್ಮಾಣಕ್ಕೆ ಬಂದಿದ್ದ ಅನುದಾನದ ಖರ್ಚು ವೆಚ್ಚದ ಬಗ್ಗೆ ಚರ್ಚಿಸಿ, ಕಟ್ಟಡವನ್ನು ಮುಂದುವರಿಸಲು ನಿರ್ಧರಿಸಲಾಯಿತು ವೀರಶೈವ ಸಮಾಜದ ರುದ್ರಭೂಮಿಗೆ ದೇಣಿಗೆ ನೀಡಲು ಚರ್ಚಿಸಿ ಪ್ರತಿ ಮನೆಯಿಂದ ದೇಣಿಗೆ ಸಂಗ್ರಹಿಸಬೇಕು, ಹಡಪದ ಅಪ್ಪಣ್ಣ ಜಯಂತಿಯನ್ನು ಅರ್ಥಪೂರ್ಣವಾಗಿ ಆಯೋಜಿಸಲು ಚರ್ಚಿಸಲಾಯಿತು ಶ್ರಾವಣ ಮಾಸದ 3ನೇ ಸೋಮವಾರ ವೀರಭದ್ರೇಶ್ವರ ದೇವರ ಕರೆತರುವ ಕಾರ್ಯದಲ್ಲಿ ಸಕ್ರಿಯರಾಗಿ ತೊಡಗಲು, ವಿವಿಧ ಜಯಂತಿ, ಸ್ವಾತಂತ್ರ್ಯ ದಿನಾಚರಣೆ ಆಚರಿಸಲು ಪ್ರತಿ ಮನೆಯಿಂದ ದೇಣಿಗೆ ಸಂಗ್ರಹಿಸೋಣ ಎಂದು ನಿರ್ಧರಿಸಲಾಯಿತು.

ಸಂಘಕ್ಕೆ ಪ್ರತಿ ವಾರ ಹಣ ಸಂಗ್ರಹಿಸುವುದನ್ನು ಶ್ರಾವಣ ಮಾಸದ ನಂತರ ಮಾಡುವ ಬಗ್ಗೆ ನಿರ್ಧರಿಸಲಾಯಿತು. ಸಂಘದ ಇತರ ಚಟುವಟಿಕೆ ಅಭಿವೃದ್ಧಿ ಮೊದಲಾದ ವಿಷಯಗಳ ಬಗ್ಗೆ ಚರ್ಚೆ ನಡೆಸಲಾಯಿತು. ಸಂಘದ ನವೀಕರಣದ ಜವಬ್ದಾರಿ, ದ್ಯಾವಮ್ಮ ದೇವಿ ಟ್ರಸ್ಟ್‌ಗೆ ರಾಮಾಂಜನೇಯರ ಹೆಸರು ನೀಡಲು ಒಮ್ಮತದಿಂದ ಒಪ್ಪಿಗೆ ನೀಡಲಾಯಿತು.


ಉದಯವಾಹಿನಿ ಚಿತ್ರ

